"SATYAVADI" ॥ ಶ್ರೀ ॥ Regd No M 1299

ಸತ್ಯವಾದಿ

ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತಪಾದದು

Proprietors—The Satyavadi Limited, Mysore

Founded 1917

ವಾರ್ಷಿಕ ಚಂದಾ ಸ್ಥಳಕ್ಕೆ ರೂ. 1—0—0

ಪರಸ್ಥಳಕ್ಕೆ ಅಂಚೆ ವೆಚ್ಚ ಸೇರಿ 1—10—0

ಸಂಪುಟ 25 ಸಂಚಿಕೆ 7] ಬುಧವಾರ 16-10-1940 [ಬಿಡಿಪ್ರತಿ 6 ಕಾಸು

ಅಪೇರ ಟಾಕೀಸಿಗೆ ಬರಲಿರುವ ಅನುರಾಧ ಚಲನ ಚಿತ್ರದೃಶ್ಯ

ಊರಿನ ವಿಚಿತ್ರ ಹೆಸರನ್ನು ನೋಡಿ?

ಸ್ವೀಡನ್ನಿನಲ್ಲಿ ಎ ಎಂಬ ಹೆಸರಿನ ಒಂದು ಊರಿರುವದು. ನಾರ್ವೆಯಲ್ಲಿ ಒಂದೂರಿಗೆ ಒ ಎಂಬ ಹೆಸರನ್ನಿಟ್ಟಿರುವರು ಚೈನಾದಲ್ಲಿ ಒಂ ಎಂಬ ಪ್ರದೇಶಕ್ಕೆ ಯು ಎಂದು ಹೆಸರು. ಹಾಲೆಂಡಿನಲ್ಲಿ ಒಂದು ಪ್ರದೇಶಕ್ಕೆ ವೈ ಎಂದು ಹೆಸರು.

ಂ ಂ

ಪಿಸಿಮಾತಿನ ಪರೀಕ್ಷೆ

ಪಿಸಿಮಾತಿನ ಪರೀಕ್ಷೆಯೊಂದನ್ನು ಮಧ್ಯ ಪ್ರಾಂತ್ಯದ ಗೌರ್ನರವರು ಜಾರಿಗೆ ತಂದಿದ್ದಾರೆ. ಅಲ್ಲಿಯ ಸಿವಿಲ್ ಸರ್ವಿಸ್ ನ್ಯಾಯಖಾತೆಯಲ್ಲಿನ ಉಮೇದುವಾರರು ಪಿಸಿಮಾತನ್ನು 10 ಅಡಿ ದೂರದಿಂದ ಕೇಳುವ ಶ್ರವಣ ಶಕ್ತಿ ಇರಬೇಕೆಂದು ನಿರ್ಣಯಿಸಿದ್ದಾರೆ.

ಸಿನಿಮಾ ಸುದ್ದಿ

ಸ್ನೇಹಪ್ರಭಳು ಬಾಂಬೆ ಟಾಕೀಸಿನೊಂದಿಗೆ ತಿಂಗಳಿಗೆ 800 ರೂಪಾಯಿ ಸಂಬಳದ ದೇಲೆ ಕಂಟ್ರಾಕ್ಟು ಮಾಡಿಕೊಂಡಿರುವಳು.

ಂ ಂ

ಆಗರ್ವಾಲ್, ಭವನಾನಿ, ಗ್ಯಲಾನಿ ಕಂಪೆನಿಯವರು ತಿಂಗಳಿಗೆ 4000 ರೂಪಾಯಿ ಸಂಬಳದಮೇಲೆ ಲೀಲಾ ಚಿಟ್ನೀಸನ್ನು ಬುಕ್ ಮಾಡಿಕೊಂಡಿರುವರು;

ಂ ಂ

ನೃತ್ಯದಲ್ಲಿ ವಿಶಾರದಳಾದ ದುರ್ಗೇಷ್ ಕುಮಾರಿಯನ್ನು ಬಾಂಬೆ ಟಾಕೀಸಿನವರು ಸೇರಿಸಿಕೊಂಡಿರುವರು. ಈಕೆಯು ಹೊಸ ತಾರೆ.

ಂ ಂ

ಪ್ರಸಿದ್ಧ ಪರ್ಷಿಯನ್ ಕವಿಯಿಂದ ವಿರಚಿತವಾದ 'ಓಮರ್ ಖಯಾಮ್' ನ್ನು ಫಿಲಂ ತೆಗೆಯಲು ಏರ್ಪಾಡು ನಡೆಯುತ್ತಲಿವೆ.

ತಾಜಾ ಸಮಾಚಾರ

ಪೆರೂವಿನ ಲೀನಾಮೆಡಿನಾ ಎಂಬ ಹುಡುಗಿಗೆ 6 ವರ್ಷ ವಯಸ್ಸು. ಈಕೆಯು 15 ತಿಂಗಳ ಹಿಂದೆ ಒಂದು ಮಗುವನ್ನು ಹೆತ್ತಳು. ತಾಯಿ ಮಗು ಸುಖವಾಗಿದ್ದಾರೆ.

ಂ ಂ ಂ

ಭರತಖಂಡವನ್ನು ಅಲ್ಲೆಗಳೆದು ಪುಸ್ತಕ ಬರೆದಿದ್ದ ಅಮೇರಿಕಾದ ಮಿಸ್ ಮೇಯೋ ಈಚೆಗ ಸತ್ತುಹೋದಳು.

ಂ ಂ ಂ

ಲಂಡನ್ನಿನ ಒಬ್ಬ ಸೈನ್ಯ ಪುರುಷ ಹ್ಯಾರಿ ಥ್ರಷ್ ಎಂಬುವನು ತನ್ನ ಹೆಂಡತಿಯು ಬೇರೊಬ್ಬನನ್ನು ಪ್ರೇಮಿಸುತ್ತಿರುವಳೆಂದೂ ವಿವಾಹ ವಿಚ್ಛೇದನಕ್ಕೆ ಅವಕಾಶಕೊಡಬೇಕೆಂದೂ ಕೋರಿದ್ದನು. ಈಕೆಯು ಇಬ್ಬರು ಮಕ್ಕಳ ತಾಯಿಯ ನಡತೆಯು ಚೆನ್ನಾಗಿಲ್ಲವೆಂಬ ವಿಷಯವನ್ನು ಕುರಿತು ಸಾಕ್ಷಿ ನುಡಿದರು.

ಂ ಂ ಂ

ಬ್ರಿಟನ್ನಿನ ಮೇಲೆ ಈಗ ಒಟ್ಟು 200 ವಿಮಾನದಾಳಿಗಳು ನಡೆದಿವೆ

ಂ ಂ ಂ

ಪೋಲೆಂಡಿನಲ್ಲಿ ನಾಜಿಗಳು ಅಲ್ಲಿಯ ಮತಗುರುಗಳನ್ನು ಜೀವಸಹಿತ ಹೂಳುತ್ತಿರುವರು

ಂ ಂ ಂ

ಸಿಲೊಂನಿನ ಒಂದು ಊರಿನ ಒಬ್ಬ ಬೌದ್ಧಮತಸ್ಥನಿಗೆ ಒಬ್ಬ ಮಗ. ಅವನು ಒಬ್ಬಳು ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾಗಲು ನಿಶ್ಚಯಿಸಿದ. ತಾಯಿಯೂ ಇದಕ್ಕೆ ಸಹಾಯ ಕಳಾದಳು. ತಂದೆಗೆ ಕ್ರಿಶ್ಚಿಯನ್ನರೊಡನೆ ವಿವಾಹ ಒಪ್ಪಲಿಲ್ಲ. ತಂದೆಯು ಮನೆಬಿಟ್ಟು ಬೇರೆ ಊರಿಗೆ ಹೋಗಿ ಉಪವಾಸವ್ರತವನ್ನಾಚರಿಸಿ ಪ್ರಾಣಬಿಟ್ಟನು.

ಂ ಂ ಂ

ಮಹಾತ್ಮಾ ಗಾಂಧಿಯವರಲ್ಲಿ ಡೆಲ್ಲೀ ರೈಲ್ವೆ ಸ್ಟೇಷನ್ನಿನಲ್ಲಿ ಒಬ್ಬ ಸೋಲ್ಜರು ಬಂದು ಸೈನ್ಯದಲ್ಲಿ ಕೆಲಸ ಮಾಡುವ ವಿಷಯದಲ್ಲಿ ಬುದ್ಧಿವಾದವನ್ನು ಬೇಡಿದನು. ಗಾಂಧೀಜಿಯವರು ಏನೂ ಹೇಳಲಿಲ್ಲ.

ಈ ವಾರದ ಕಥೆ—

ಪ ಶ್ಚಾ ತ್ತಾ ಪ

(ಮು|| ಜಿ. ಆರ್. ಮಹಾಬಲಭಟ್ಟರು, ವೇದಾಂತಶಿರೋಮಣಿ ವೇದಾಂತವಿಶಾರದ)

(ಕಳೆದ ಸಂಚಿಕೆಯಿಂದ ಮುಂದುವರಿದುದು)

———

ಅಜಯನು ಆ ಅಂಧಕಾರಮಯವಾದ ರಾತ್ರಿಯಲ್ಲೇ ಅರಮನೆಯಿಂದ ಹೊರ ಹೊರಟನು. ಅಶ್ವಶಾಲೆಯಿಂದ ಕುದುರೆಯನ್ನು ತಂದು ಅದರ ಮೇಲೆ ಹತ್ತಿ ಪಟ್ಟ ಣವನ್ನು ಬಿಟ್ಟು ತೆರಳಿದನು.

ಬೆಳಿಗ್ಗೆ ಅಜಯಸಿಂಹನು ಇಲ್ಲದಿರುವದನ್ನು ಕಂಡು ಅರಮನೆಯಲ್ಲಿ ದೊಡ್ಡ ಗಲಭೆಯಾಯಿತು. ಅಲ್ಲಿ ಇಲ್ಲಿ ಹುಡುಕಾಡಿದರು. ನಿಷ್ಫಲವಾಯಿತು. ಒಂದ ದಿನವಾಯಿತು, ಎರಡು ದಿನವಾಯಿತು ; ಹೀಗೆಯೇ ತಿಂಗಳುಗಟ್ಟಲೆ ಕಳೆದು ಹೋ ಯಿತು. ಆದರೂ ಯುವರಾಜನ ಸುದ್ದಿಯಿಲ್ಲ. ಮತ್ತೇನೆಂದರೆ—ಈ ದಿನ ಸು ಜೆಯೇ ಕುಮಾರನ ಕುದುರೆಯು ಮಾತ್ರ ಹಿಂದಿರುಗಿ ಒಂದಿದ್ದಿತು. ಅದರ ಬೆನ್ನಿನ ಮೇಲೆ ವಸ್ತ್ರದ ತುಂಡೊಂದಿತ್ತು. ಅದರೊಳಗೊಂದು ಚಿಕ್ಕ ಕಾಗದ—" ಪೂಜ್ಯ ತಂದೆಯವರ ಸನ್ನಿಧಾನಕ್ಕೆ. ನಾನು ತಮಗುತ್ತರಾಧಿಯಾಗಲು ಅಯೋಗ್ಯನಿರು ಅಯೋಗ್ಯನಿರವೆನು. ನನ್ನನ್ನ ಕ್ಷಮಿಸಿರಿ. ಈಗ ನನ್ನನ್ನು ಹುಡುಕುವದು ವ್ಯರ್ಥ. ಇತಿ ನಿಮ್ಮ ಸೇವಕ, ಅಜಯ. "

ಕಾಗದವನ್ನೋದಿ ಮಹಾರಾಜನು ಬಿಕ್ಕಿಬಿಕ್ಕಿ ಅಳತೊಡಗಿದನು.

(೩)

ಅಜಯನು ಅರಮನೆಯಿಂದ ಹೊರಟು ನೆಟ್ಟಗೆ ಅಡವಿಗೆ ತೆರಳಿದನು. ಬೆಳ ಗಾಗುವಾಗ ಒಂದು ಗುಡ್ಡದ ಬಳಿಯ ಝರಿಯ ಹತ್ತಿರ ಬಂದನು ಅಲ್ಲಿಯೇ ಕುದುರೆಯಿಂದಿಳಿದು, ಬಂದ ದಾರಿಯಲ್ಲೇ ಕುದುರೆಯನ್ನು ಹಿಂದಕ್ಕಟ್ಟಿದನು. ಝರಿಯ ಹತ್ತಿರವೇ ಸ್ವಲ್ಪ ಮುಂದಕ್ಕೆ ಹೋಗಲು ಒಂದು ಕುಟೀರವು ಸಿಕ್ಕಿತು. ಅಲ್ಲಿ ವೃದ್ಧ ಮಹಾತ್ಮನೊಬ್ಬನು ಜಪಾನುಷ್ಠಾನ ತತ್ಪರನಾಗಿ ಕುಳಿತಿದ್ದನು. ಮಹಾತ್ಮನ ಅನುಷ್ಠಾನಗಳೆಲ್ಲವೂ ಮುಗಿಯುವವರೆಗೆ ಕುಮಾರನು ದೂರದಲ್ಲಿ ನಿರೀ ಕ್ಷಿಸುತ್ತಾ ಇದ್ದನ. ಮುಗಿದೊಡನೆ ಹತ್ತಿರ ಒಂದು ಕಾಲಿಗೆ ಬಿದ್ದನು.

ಮಹಾತ್ಮನು ಅಜಯನನ್ನು ಹತ್ತಿರ ಕುಳ್ಳಿರಿಸಿಕೊಂಡು ಮಾತಾಡಿಸಿದನು. ಈಗ ಅಜಯನಿಗೆ ರಾಜ್ಯದ ಮೇಲೆ ವೈರಾಗ್ಯವುಂಟಾಗಿದ್ದಿತ. ಪೆಶ್ಚಾತ್ತಾಪವು ಈ ವೈರಾಗ್ಯದ ರೂಪವನ್ನು ತಾಳಿದ್ದಿತು. ಅಜಯನು ತಾನು ಮನೆ ಬಿಟ್ಟುಬಂದ ಘಟನೆಯೆಲ್ಲವನ್ನೂ ಮಹಾತ್ಮರ ಬಳಿಯಲ್ಲಿ ವಿಜ್ಞಾಪಿಸಿ " ಈಗ ತಾವು ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕು. " ಎಂದು ಬೇಡಿದನ.

ಮಹಾತ್ಮನು ಬೇಕಾದಷ್ಟು ತಿಳಿಸಿದನು. ಆದರೂ ಕುಮಾರನು ಹಿಂದಿರುಗ ಲೊಪ್ಪಲಿಲ್ಲ. ಆಗ ರಾಜಕುಮಾರನ ದೃಢವೈರಾಗ್ಯವನ್ನು ಕಂಡು ಮಹಾತ್ಮನು ಹತ್ತಿರವಿದ್ದ ಒಂದು ಗುಹೆಯನ್ನು ತೋರಿಸಿ ಅಲ್ಲಿ ಸಾಧನ ಮಾಡಲು ಆಜ್ಞೆ ಮಾಡಿದನು.

ಈಗ ಯುವರಾಜ ಅಜಯಸಿಂಹನು ಕಾಡಿನ ಕಂದಮೂಲ ಫಲಗಳನ್ನು ತಿಂದು ಜೀವನನಿರ್ವಾಹ ಮಾಡುತ್ತಾ ಅದೇ ಗುಹೆಯಲ್ಲಿ ಸಾಧನತತ್ಪರನಾದನು. ಕಾಡಿನಲ್ಲಿರುವ ರೋಗಿ ಆರ್ತವಾ ಪೀಡಿತ ವ್ಯಗಗಳ ಶುಶ್ರೂಷೆ ಮಾಡುವುದು ಅಜ ಯನ ವಿಶೇಷ ಕಾರ್ಯವಾಗಿದ್ದಿತು. ಆಡವಿಯಲ್ಲಿನ ವ್ಯಗಗಳಲ್ಲಿ ಸಿಂಹದಿಂದ ಮೊದ ಲ್ಗೊಂಡು ಚಿಕ್ಕಮೃಗದವರೆಗೆ ಎಲ್ಲವೂ ಅವನಿಗೆ ಪರಿಚಿತವಾದವು. ಈಗ ಅಜ ಯನು ಗುಹೆಯಿಂದ ಹೊರಹೊರಟನೆಂದರೆ ನಾಲ್ಕೂ ಕಡೆಯಿಂದ ಪಶುಪಕ್ಷಿಗಳು ಬಂದು ನೆರೆಯುತ್ತಿದ್ದವು. ಎಲ್ಲಾ ಪಶುಪಕ್ಷಿಗಳಿಗೂ ಕುಮಾರನಲ್ಲಿ ಅಸಾಧಾ ರ್ಪ್ರೇಮವುಂಟಾಗಿದ್ದಿತು.

ಯಾವುದಾದರೂ ಮೃಗವು ದುಃಖಿಯಾಗಿದ್ದರೆ ಅದು ಒಡನೆ ಅಜಯನ ಗುಹೆಗೆ ಬರುತ್ತಿದ್ದಿತು. ಗುಹೆಯ ಬಳಿಯಲ್ಲಿ ಎಲ್ಲಾ ಮೃಗಗಳು ಬಂಧುಗಳಂತಿ ದ್ದವು. ಅಲ್ಲಿಗೆ ಒಂದೊಡನೆಯೇ ಪರಸ್ಪರ ವೈರವು ಮರೆತುಹೋಗುತ್ತಿದ್ದಿತು. ಕುಮಾರನು ದಿನವೂ ಸಾಧನಾನುಷ್ಠಾನವನ್ನು ಮುಗಿಸಿದನಂತರ ಎದ್ದುಬಂದು ತನ್ನ ಕೈಯಿಂದಲೇ ಕಾಳು, ಹುಲ್ಲು, ಹಣ್ಣುಗಳನ್ನು ತಿನ್ನಿಸುತ್ತಿದ್ದನು. ಸಿಂಹದಂತಹ ಮಾಂಸಾಹಾರಿ ವ್ಯಗಗಳೂ ಕೂಡ ಅಜಯನ ಕೈಯಿಂದ ಹಣ್ಣುತಿಂದು ಹೋಗು ತ್ತಿದ್ದವು.

(೪)

ಒಂದು ವರುಷ ಕಳೆಯಿತು. ಅದೇ ವಿಜಯದಶಮಿ ದಿನವು ಬಂದಿತು. ಕೋ ಲಾಹಲವನ್ನು ಮಾಡುತ್ತಾ ರಜಪೂತ ವೀರರ ಸೇನೆಯು ಬೇಟೆಗೆ ಹೊರಟಿತು. ಮಹಾರಾಜಾ ಧೀರಸಿಂಹನು ಮುಂದೆ ಮುಂದೆ ಹೋಗುತ್ತಿದ್ದನು. ಕಾಡಿನ ಪಶು ಪಕ್ಷಿಗಳೆಲ್ಲವೂ ಹೆದರಿ ಆ ವಿಜಯಸಿಂಹನಿದ್ದ ಗುಹೆಯ ಬಳಿಗೆ ಓಡಿದವು. ಗುಹೆ ಯ ಹೊರಗ ಪಶುಪಕ್ಷಿಗಳು ಚೀತ್ಕರಿಸುತ್ತಿರುವುದನ್ನು ಕೇಳಿ ಕುಮಾರನು ಒಳಗೆ ಕುಳ್ಳಿರಲಾರದಾದನು. ಅನುಷ್ಠಾನವನ್ನು ಬಿಟ್ಟು ಹೊರಗೆ ಬಂದನು. ಕುಮಾರನು ಹೊರಗೆ ಬಂದುದನ್ನು ನೋಡಿ ಪಶುಪಕ್ಷಿಗಳಿಗೆ ಸ್ವಲ್ಪ ಸಮಾಧಾನವಾಯಿತು.

ಕುಮಾರನು ನೋಡಿದನು—ಎಲ್ಲವೂ ಹೆದರಿ ನಡುಗಿ ಆಶ್ರಯವನ್ನು ಹುಡು ಕುತ್ತಿದ್ದವು. ಆಗ ನೆನಪಾಯಿತು—ಇಂದು ಆ ವಿಜಯದಶಮಿ. ಆ ದಿನ ತಾನು ಮಾಡಿದ್ದ ಹರಿಣ ಮೃಗ ವಧೆಯ ದೃಶ್ಯವು ಎದುರಿಗೆ ಬಂದು ನಿಂತಂತಾಯಿತು. " ಇಂದು ನನ್ನ ಪ್ರಾಣವನ್ನಾದರೂ ಬಲಿಕೊಟ್ಟು ಆಶ್ರಿತರಕ್ಷಣೆಯನ್ನು ಮಾಡಲೇ ಬೇಕಾಗಿದೆ. ಒಬ್ಬ ಭಿಲ್ಲರ ಹುಡುಗಿಯು ಆಶ್ರಯ ಕೊಡಬಲ್ಲವಳಾಗಿರುವಾಗ ಕ್ಷತ್ರಿಯ ಕುಮಾರನೊಬ್ಬನು ಕೊಡಲಾರನೇ ! " ಎಂದು ಯೋಚಿಸಿ ಅಜಯಸಿಂ ಹನು ಬೇಟೆಗಾರರನ್ನು ನೋಡಲನುಕೂಲವಾಗುವ ಒಂದು ಎತ್ತರ ಸ್ಥಳದಲ್ಲಿ ನಿಂ ತುಕೊಂಡನು.

ವ್ಯಗಗಳನ್ನು ಹುಡುಕಾಡುತ್ತಿದ್ದವರು ಅಡವಿಯನ್ನೆಲ್ಲಾ ಸುತ್ತಿದರು. ಎ ಲ್ಲಿಯೂ ಮೃಗವು ಸಿಕ್ಕಲಿಲ್ಲ. ಕಾಲಿನ ಹೆಜ್ಜೆಯನ್ನು ನೋಡುತ್ತಾ ನೋಡುತ್ತಾ ಝರಿಯ ಬಳಿಗೆ ಬಂದರು. ದೂರದಿಂದಲೇ ಅಲ್ಲಿನ ದೃಶ್ಯವನ್ನು ಕಂಡು ಆಶ್ಚರ್ಯ ಪಟ್ಟು ಮಹಾರಾಜನಿಗೆ ವಿಜ್ಞಾಪಿಸಿದರು. ಸೇನೆಯೊಡನೆ ಮಹಾರಾಜನು ಮುಂದೆ ಬಂದನು. ಬೇಟೆಗಾರರನ್ನು ನೋಡಿದೊಡನೆಯೇ ಪಶುಪಕ್ಷಿಗಳು ಅರು ಚಾಡತೊಡಗಿದವು. ಕಾತರ ದೃಷ್ಟಿಯಿಂದ ಅಜಯಸಿಂಹನನ್ನು ನೋಡತೊಡಗಿ ದವು. ಮಹಾರಾಜಾ ಧೀರಸಿಂಹನು ಹೆದೆಯೇರಿಸಿ ಬಾಣಬಿಡಲು ಸಜ್ಜಾದನು. ಅಷ್ಟರೊಳಗೆ ತರುಣ ತಪಸ್ವಿಯೊಬ್ಬನು ಮುಂದೆ ಬಂದು ರಾಜನಿದುರಾಗಿ ನಿಂತನು. ಕೈಯೆತ್ತಿ ಹೇಳಿದನು — " ಯಾವ ಪ್ರಾಣಿಯನ್ನೂ ಇಲ್ಲಿ ಕೊಲ್ಲಲಾಗದು. ಒಂದು ವೇಳೆ ಬಲಾತ್ಕರಿಸಿದರೆ ಎಲ್ಲಕ್ಕಿಂತ ಮೊದಲು ನನ್ನನ್ನು ಕೊಲ್ಲಬೇಕಾಗು ವುದು ". ಜಡೆಬೆಳೆಸಿದ್ದುದರಿಂದ ಮಹಾರಾಜನು ಮಗನನ್ನು ಗುರುತಿಸಲಾಗ ಲಿಲ್ಲ. ತಪಸ್ವಿಯ ಮಾತನ್ನು ಕೇಳಿದೊಡನೆ ಮಹಾರಾಜನು ಕುದುರೆಯಿಂದಿಳಿದು ಬಂದನು. ಎಲ್ಲರೂ ಕುದುರೆಯಿಂದಿಳಿದರು. ನಮಸ್ಕರಿಸುತ್ತಿರುವ ಮಗನನ್ನು ಅಪ್ಪಿಕೊಂಡನು. ಬೇಟೆಯು ನಿಲ್ಲಿಸಲ್ಪಟ್ಟಿತು. ಎಲ್ಲರೂ ಮಹಾತ್ಮನ ಬಳಿಗೆ ಬಂದರು, ಆದರಸತ್ಕಾರವಾಯಿತು.

ಮಹಾರಾಜನಿಗೆ ಕುಳಿತುಕೊಳ್ಳಲು ಸೇವಕನೊಬ್ಬನು ಸುಂದರಮೃಗ ಚರ್ಮ ವನ್ನು ಹಾಸಿದನು. ಅಜಯಸಿಂಹನು ಕಣ್ಣೀರು ಸುರಿಸುತ್ತಾ ಅದನ್ನೇ ನೋಡು ತ್ತಾ ನಿಂತನು. ಮಹಾತ್ಮನು ಅಜಯನ ಸ್ಥಿತಿಯನ್ನರಿತು ಮಹಾರಾಜನನ್ನು ಕುರಿತು ಹೇಳಿದನು—" ನನಗೆ ಈ ಮೃಗಚರ್ಮದ ಅಗತ್ಯವಿಲ್ಲ."

ಮಹಾರಾಜನು ಒಡನೆ ಅದನ್ನು ಕೊಟ್ಟು ಹೇಳಿದನು—" ನಾನು ದ್ಯೂ- ಈ ರಾಜ್ಯವೇ ತಮ್ಮದಿದೆ."

ಮಹಾತ್ಮನು ಕಮಂಡಲ ಜಲವನ್ನು ಮೃಗಚರ್ಮದ ಮೇಲೆ ಅಭಿಮಂತ್ರಿಸಿ ಪ್ರೋಕ್ಷಿಸಿದನು. ಒಡನೆ ಎಲ್ಲರೂ ನೋಡುತ್ತಿದ್ದಂತೆಯೇ ಜೀವಿತಮೃಗವಾಯಿತು. ಆಶ್ಚರ್ಯದಿಂದ ಮಹಾತ್ಮನ ಚರಣಕ್ಕೆ ವಂದಿಸಿದರು. ಮಹಾತ್ಮನು ಹೇಳಿದನು— " ಈ ಮೃಗವು ನಿನ್ನದು, ನೀನಿನ್ನು ಯೋಚಿಸಬೇಕಾಗಿಲ್ಲ.

ಅಜಯಸಿಂಹನು ಗುರುವಿನ ಆಜ್ಞೆಯಿಂದ ಮಹಾರಾಜನೊಡನೆ ರಾಜಧಾನಿ ಗೆ ಹಿಂದಿರುಗಿದನು. ಹಿಂದಿರುಗಿದ ಮೇಲೆ ಮಹಾರಾಜನು ಇನ್ನೆಂದೂ ಪಶುವಧೆ ಯನ್ನು ನಡೆಸಲಾಗದೆಂದು ಪಟ್ಟಣದಲ್ಲಿ ಸಾರಿದನು.

ಒಫೇಲಖಂಡದ ಅರಣ್ಯದಲ್ಲಿ ಈಗಲೂ ಆ ಅಜಯಗುಹೆಯಿರುವುದು. ಆ ಗುಹೆಯ ಬಳಿಯಲ್ಲಿ ಈಗಲೂ ಮೃಗಗಳಲ್ಲಿ ಪರಸ್ಪರ ವೈರವಿರುವುದಿಲ್ಲವೆಂದು ಅಲ್ಲಿನ ಭಿಲ್ಲರು ಹೇಳುತ್ತಾರೆ.

ಇ ತಿ ಶ ಂ.

ಈ ವಾರದ ಭವಿಷ್ಯ

ಜ್ಯೋತಿಷ್ಕರ್ — ಕೃಷ್ಣಾಪುರದ
ಶೇಟ್ಲೂರು ವೆಂಕಟನರಸಿಂಹಾಚಾರ್
ಬೃಹಸ್ಪತಿ ಜ್ಯೋತಿಷಾಲಯ,
ಹಳೇ ಪೋಸ್ಟಾಫೀಸು ರೋಡು, ಮೈಸೂರು

ಮೇಷ

ತಾ || 16 19 20 ಸಂಚಾರಾಧಿಕ ಸ್ತ್ರೀ ವಿರೋಧ ಆಪ್ತಬಂಧುವಿಗೆ ತೊಂದರೆ ಸರ್ಕಾರಿ ಕಾರ್ಯ ಮುಂದುವರಿಸುವಿಕೆ ಮನಶ್ಚಾಂಚಲ್ಯ ಅನಾರೋಗ್ಯ ವ್ಯಯಾಧಿಕ. ಸಹಸ್ರನಾಮ ಪಾರಾಯಣ ಮಾಡಿ ರುದ್ರಾಭಿಷೇಕಕ್ಕೆ ಸಹಾಯವಾಡಿ ಕ್ಷೇಮ. ಬಾಕಿ ದಿನಗಳು ಅನುಕೂಲವಾಗಿವೆ.

ವೃಷಭ

ತಾ || 16 19 20 [illegible] ಶತ್ರು ಸುಖ ಬಂಧುವಿರೋಧ ಅನುಕೂಲ [illegible] ದರ್ಶನ ಬಂಧುಭಾಗ್ಯ ಗೃಹಾಭಿವೃದ್ಧಿ ಮನೋತ್ಸಾಹ ಕೀರ್ತಿ ವಿಕ್ಕ ದಿನಗಳು ಧನವ್ಯಯ ಅಧಿಕಾರಿಗಳಲ್ಲಿ ನಿಷ್ಠುರ ಬಂಧುವಿರೋಧ ಧನಧಾನ್ಯ ವ್ಯಯ ಅನಾರೋಗ್ಯ ಚಂಚಲತೆ. ಸೂರ್ಯನಮಸ್ಕಾರ ಮಾಡಿ ಎಳ್ಳುದಾನಕೊಡಿ ಶುಭ.

ಮಿಥುನ

ಈ ವಾರ ನಿಮಗೆ ಇಷ್ಟ ಸಿದ್ಧಿ ಮಿತ್ರಾನುಕೂಲತೆ ಕಾರ್ಯದಲ್ಲಿ ಜಯಪ್ರದ ವಾಹನಾದಿ ಸುಖ ಭೂವ್ಯವಸಾಯಾಧಿ ಫಲಸಿದ್ಧಿ ರಾಜಕೀಜನರಿಂದ ಮರ್ಯಾದೆ ಸ್ವಪಂಜನರಲ್ಲಿ ಮನ್ನಣೆ.

ಕರ್ಕಾಟಕ

ಈ ವಾರ ನಿಮಗೆ ಸಂಪಾರ್ಥಿಕ ವಿದ್ಯಾಭಿವೃದ್ಧಿ ದೊಡ್ಡವರಲ್ಲಿ ಗಣ್ಯತೆ ಕಾರ್ಯಾನುಕೂಲತೆ ಸ್ತ್ರೀ ಮೂಲ್ಕ ಲಾಭ ಧಾನ್ಯಾಭಿವೃದ್ಧಿ ಪುಣ್ಯ ತೀರ್ಥಸ್ನಾನ ಫಲ ರಾಜಕೀ ಜನರಿಂದ ಅನುಕೂಲತೆ ಸಂಘಕಾರ್ಯದಲ್ಲಿ ಮರ್ಯಾದೆ ಗೃಹಾಭಿವೃದ್ಧಿ. ತಾ || 16 ಕಾರ್ಯಭಂಗ ಅಪಕೀರ್ತಿ ವ್ಯಯಾಧಿಕ. ಅಕ್ಕಿದಾನಮಾಡಿ ಶುಭ

ಸಿಂಹ

ತಾ || 16 17 18 ಬಂಧುವಿರೋಧ ಆಪ್ತರಿಗೆ ತೊಂದರೆ ಧಾನ್ಯವ್ಯಯ ಅನಾರೋಗ್ಯ ಕಾರ್ಯಭಂಗ ಸರ್ಕಾರಿಕಾರ್ಯ ಮುಂದುವರಿಸುವಿಕೆ ಚಂಚಲತೆ ಸಾಲದ ತಗಾದೆ ಅಪಕೀರ್ತಿ ಸಹಸ್ರನಾಮ ಪಾರಾಯಣಮಾಡಿ ಶುಭ ಫಲ. ಬಾಕಿ ದಿನಗಳಲ್ಲಿ ಮಿತ್ರಾನುಕೂಲತೆ ಪುಣ್ಯ ತೀರ್ಥಸ್ನಾನ ಫಲ ಸದ್ವ್ಯವಹಾರ ಕೀರ್ತಿ ರಾಜಕೀಜನರಲ್ಲಿ ಗಣ್ಯತೆ ಗೃಹಾಭಿವೃದ್ಧಿ ಸ್ವಪರ ಜನಸಹಾಯ ವಿದ್ಯಾಭಿವೃದ್ಧಿ ಶುಭೋದಯ.

ಕನ್ಯಾ

ತಾ || 16 21 22 ದೇವತಾಪೂಜೆಯಲ್ಲಿ ಅಸಕ್ತಿ ಮಿತ್ರದರ್ಶನ ರಾಜಕೀಜನರಿಂದ ಮನ್ನಣೆ ಪುಣ್ಯತೀರ್ಥಸ್ನಾನಫಲ ಶುಭವಾರ್ತಾಧಿಕ ಕಲಹದಲ್ಲಿ ಶತ್ರುಂಜಯ ಗುರುಸೇವಾಫಲ ವಿಕ್ಕ ದಿನಗಳಲ್ಲಿ ಅಪಕೀರ್ತಿ ಬಂಧುವಿಗೆ ತೊಂದರೆ ಅನಾರೋಗ್ಯ ಸ್ವಜನರೊಡನೆ ಮನಸ್ತಾಪ ಕಾರ್ಯಭಂಗ ಸರ್ಕಾರೀಕಾರ್ಯ ಮುಂದುವರಿಯುವಿಕೆ ವ್ಯಯಾಧಿಕ. ಆದಿತ್ಯಹೃದಯ ಪಾರಾಯಣ ಮಾಡಿ, ಗೋಧವೆ ತೊಗರೀಬೇಳೆ ದಾನ ಮಾಡಿ ಶುಭ,

ತುಲಾ

ತಾ|| 16 17 18 ಗೃಹಾಭಿವೃದ್ಧಿ ಆಭರಣಾದಿ ಸುಖ ರಾಜಕೀಜನರಿಂದ ಮನ್ನಣೆ ಕೀರ್ತಿ ವ್ಯಯಾತ್ಮ ಕಾರ್ಯಾನುಕೂಲ ಲಾಭಾಧಿಕ ಪಶ್ವಾದಿ ಭಾಗ್ಯ. ವಿಕ್ಕ ದಿನಗಳಲಿ ಮನೋವ್ಯಥೆ ಅಪಕೀರ್ತಿ ಸ್ವಪರ ಜನರಲ್ಲಿ ನಿಷ್ಠುರ ಸ್ವಯಾತ್ಮ ಕಾರ್ಯನಷ್ಟ ರಾಜಕೀಜನರಿಂದ ಕಷ್ಟ ಸ್ತ್ರೀ ವಿರೋಧ ಅನಾರೋಗ್ಯ. ಸೂರ್ಯನಮಸ್ಕಾರಮಾಡಿ ಹುತ್ತಕ್ಕೆ ಹಾಲುಬಿಡಿ ಶುಭ ಫಲ.

ವೃಶ್ಚಿಕ

ಈ ವಾರ ನಿಮಗೆ ಆಭರಣಾದಿ ಸುಖ ಭೂವ್ಯವಸಾಯದಲ್ಲಿ ಲಾಭ ಅಧಿಕಾರ ವರ್ಗದಲ್ಲಿ ಮನ್ನಣೆ ದೇಹಾರೋಗ್ಯ ಮಿತ್ರಾನುಕೂಲತೆ ಶುಭಕಾರ್ಯಾದಿ ಸಂತೋಷ, ಲಾಭ.

ಧನು

ತಾ || 16 17 18 ಅಧಿಕಾರಿ ವರ್ಗದಲ್ಲಿ ಕಲಹ ಪ್ರಯತ್ನಕಾರ್ಯಭಂಗ ಜನರಲ್ಲಿ ವ್ಯಮನಸ್ಸು ನೀಚಸ್ತ್ರೀ ವಿರೋಧ ಗೃಹಕೃತ್ಯದಲ್ಲಿ ಅನಾನುಕೂಲತೆ ಅನಾರೋಗ್ಯ ವ್ಯಯಾಧಿಕ ಬೆಲ್ಲ ಎಳ್ಳು ದಾನ ಕೊಡಿ ಕ್ಷೇಮ. ಬಾಕಿ ದಿನಗಳು ಎಲ್ಲಕ್ಕೂ ಅನುಕೂಲವಾಗಿವೆ.

ಮಕರ

ಈ ವಾರ ನಿಮಗೆ ಕಾರ್ಯಾನುಕೂಲತೆ, ಮನೋಲ್ಲಾಸ ಅಧಿಕಾರವರ್ಗದವರ ಪ್ರೀತಿ ಬಂಧೂಪಕಾರ ಸಂಘಕಾರ್ಯದಲ್ಲಿ ಮರ್ಯಾದೆ ಕೀರ್ತಿ ಉತ್ಸಾಹ ಲಾಭ.

ಕುಂಭ

ತಾ || 16 19 20 ಕಾರ್ಯಭಂಗ ಚಂಚಲತೆ ಅಪಕೀರ್ತಿ ವಾಹನನಷ್ಟ ಅಧಿಕಾರವರ್ಗದಲ್ಲಿ ವಿರೋಧ ವ್ಯಯಾಧಿಕ ಸಂಚಾರಾಧಿಕ ಸ್ತ್ರೀ ವಿರೋಧ ಮಿತ್ರದೊಡನೆ ಮನಸ್ತಾಪ ಸೂರ್ಯನಮಸ್ಕಾರಮಾಡಿ ಲಕ್ಷ್ಮೀಪೂಜೆಗೆ ಸಹಾಯ ಮಾಡಿ ಶುಭ. ಇತರ ದಿನಗಳಲ್ಲಿ ಗೃಹಾಭಿವೃದ್ಧಿ ಪ್ರಯತ್ನಕಾರ್ಯಸಿದ್ಧಿ ಸರ್ಕಾರೀ ಕಾರ್ಯಾನುಕೂಲತೆ ಸುಖಾಧಿಕ ಲಾಭಕಾರ್ಯ ವಿದ್ಯಾಸುಖ ಗಣ್ಯತೆ ಕೀರ್ತಿ.

ಮೀನ

ತಾ || 17 18 22 ಕಾರ್ಯಭಂಗ ಸಮಾನ ಜನ ವಿರೋಧ ಆನಾರೋಗ್ಯ ಚಂಚಲತೆ ಸ್ತ್ರೀ ವಿರೋಧ ವ್ಯಯಾಧಿಕ ಸರ್ಕಾರಿಕಾರ್ಯ ಮುಂದುವರಿಸುವಿಕೆ ಬಂಧುಜನರಲ್ಲಿ ಮನಸ್ತಾಪ. ಇತರ ದಿನಗಳಲ್ಲಿ ಸುಖಾಧಿಕ ಆರೋಗ್ಯ ಸತ್ಕಾರ ಮಂಗಳಕಾರ್ಯ ಬಂಧುಮಿತ್ರಾನುಕೂಲತೆ ಸಂಘಕಾರ್ಯದಲ್ಲಿ ಗಣ್ಯಭ ಲಾಭ ಉತ್ಸಾಹ;

ನುಲಭ ಚಿಕಿತ್ಸೆ

ಕಾಲರಾ, ಮಸೂಚಿ ಮೊದಲಾದ ಭಯಂಕರ ವ್ಯಾಧಿಗಳು ಬಾರದಂತೆ ಕಾಪಾಡಿಕೊಳ್ಳಲು—

1 ಆಳಲೇಕಾಯಿ ಬೀಜಕ್ಕೆ ರುದ್ರವನ್ನು ಮಾಡಿ, ಗಂಡಸರು ಬಲಗೈಗೂ, ಹೆಂಗಸರು ಎಡಗೈಗೂ ಧಾರದಿಂದ ಕಟ್ಟಿಕೊಂಡಿದ್ದಲ್ಲಿ ಕಾಲರಾ ಮೊದಲಾದ ವ್ಯಾಧಿಗಳ ಭಯವು ನಿಜವಾಗಿಯೂ ಇರುವುದಿಲ್ಲ.

2 ಆನೆಯ ದಂತದ ಬಾಚಣಿಗೆಯನ್ನು ಬಾಚಿಕೊಳ್ಳಲು ಉಪಯೋಗಿಸುತ್ತಿರುವವರಿಗೆ ಕಾಲರಾ ವ್ಯಾಧಿಯು ಬರುವದಿಲ್ಲ.

3 ಎಕ್ಕದ ಹುವ್ವುಗಳನ್ನು ಒಣಗಿಸಿ, ಚೂರ್ಣಮಾಡಿ ಆ ಚೂರ್ಣವನ್ನು ಗುಲಗಂಜೀ ತೂಕದ ಪ್ರಮಾಣದಲ್ಲಿ ಕೊಡುತ್ತ ಬಂದಲ್ಲಿ ಕಾಲರಾ ವ್ಯಾಧಿಯು ನಿವಾರಣೆಯಾಗುವದು.

4. ಜೋಡಸರಡ ಕಾಯಿಗಳನ್ನು ಹಾರದಂತೆ ಮಾಡಿ ಮಸೂಚಿಯಿಂದ ಪೀಡಿತರಾದವರ ಕೊರಳಿಗೆ ಹಾಕಿದ್ದಲ್ಲಿ ಅಥವಾ ಕೈಗಳಿಗೆ ಕಟ್ಟಿದ್ದಲ್ಲಿ ಆ ವ್ಯಾಧಿಯು ಮಾಯವಾಗುವದು— ಈ ಕಾಯಿಗಳನ್ನು ಸೇವಿಸಲು ಕೂಡ ಉಪಯೋಗಿಸಬಹುದು.

ನಂಬಿಕೆಯಿರುವವರಿಗೆ ಗುಣವು ಖಂಡಿತವೆಂದು, ಅತ್ಯದ್ಭುತ ರಹಸ್ಯ ರತ್ನಾಕರವೆಂಬ ಗ್ರಂಥದಲ್ಲಿ ತಿಳಿಸಿರುತ್ತದೆ.

ಓಂ.

ಹಿಟ್ಲರ್ ಮುಸೋಲಿನಿಯ ಭೇಟಿ

ಕಳೆದ ತಾ|| 4 ರಲ್ಲಿ ಹಿಟ್ಲರ್ ಮತ್ತು ಮುಸೋಲಿನಿಯ ಭೇಟಿಯು ಬ್ರೆನ್ನರ ಕಣಿವೆಯಲ್ಲಿ ಜರಗಿತು. ಆ ಕಾಲಕ್ಕೆ ಇವರಿಬ್ಬರಲ್ಲಿ ಸುಮಾರು 1—50 ಘಂಟೆಯು ಕಾಲ ಮಾತುಕತೆಗಳು ನಡೆದವು. ಆಗ್ಗೆ ಇಟಲಿ ಜರ್ಮನಿಗಳ ಹಲವು ಸೇನಾಧಿಪತಿಗಳು ಹಾಜರಿದ್ದರು ಆದರೆ ಆಗ ನಡೆದ ಮಾತುಕತೆಗಳು ಹೊರಬಿದ್ದಿಲ್ಲ. ಅವರು ಯುದ್ಧವನ್ನು ಹೆಚ್ಚುಮಾಡುವ ಬಗ್ಗೆ ಚರ್ಚಿಸಿರಬಹುದೆಂದು ಊಹಿಸಲಾಗಿದೆ.

ನರರಕ್ತದ ಚೂರ್ಣ

ಗಾಯದಿಂದಾಗಿ ದೇಹದಿಂದ ವಿಪರೀತ ರಕ್ತ ನಷ್ಟವಾದರೆ ಸಂಗ್ರಹಿಸಿಟ್ಟ ರಕ್ತವನ್ನು ದೇಹಕ್ಕೆ ತುಂಬಿಸಿ ಚಿಕಿತ್ಸೆ ಮಾಡುವದು ಈಗ ರೂಢಿಯಲ್ಲಿದೆ ಮುಖ್ಯವಾಗಿ ಸೈನಿಕರಿಗೆ ಇದರ ಉಪಯೋಗ ಜಾಸ್ತಿ.

ಉದಾರ ಮನುಷ್ಯರು ತಮ್ಮ ದೇಹದಿಂದ ತಾವಾಗ ಕೊಟ್ಟ ರಕ್ತವನ್ನು ಇದಕ್ಕಾಗಿ ಸಂಗ್ರಹಿಸಿಡುವರು. ಇಂಥಾ ರಕ್ತವನ್ನು ಪುಡಿಮಾಡಿ ಚೂರ್ಣರೂಪದಲ್ಲಿ ಸಂಗ್ರಹಿಸಿಡುವ ಕ್ರಮವನ್ನೀಗ ಬ್ರಿಟನ್ನಿನಲ್ಲಿ ಕಂಡುಹಿಡಿದಿದ್ದಾರೆ.

Founded 1917

SATYAVADI

* ರಾಜಕೀಯ ಪರಿಸ್ಥಿತಿಗಳು *
* ಸಾಮಾಜಿಕ ಸುಧಾರಣೆಗಳು *
* ದೇಶವಿದೇಶ ವರ್ತಮಾನಗಳು *
* ಚಿತ್ರವಿಚಿತ್ರ ವಾರ್ತಾವಳಿಗಳು *

ಇವೆಲ್ಲ ವಿಷಯಗಳ ಕುರಿತು ತಿಳಿಯಬೇಕಾದರೆ, ಇಡೀ ಕರ್ನಾಟಕದ ಹೊರ-ಒಳ ಭಾಗಗಳಲ್ಲಿ ಎಲ್ಲಾ ತರದ ಜನರಿಂದಲೂ ಆದರಿಸಲ್ಪಡುತ್ತಿರುವ

ನವಸಂದೇಶ

ಇಂದೇ ಚಂದಾದಾರರಾಗಿರಿ.

ಅಂಚೇವೆಚ್ಚ ಸೇರಿ ರೂ. ೩-೮-೦

ಹೆಚ್ಚಿನ ವಿಷಯಗಳಿಗೆ ಮ್ಯಾನೇಜರಿಗೆ ಬರೆಯಿರಿ

ನವಸಂದೇಶ ಕಾರ್ಯಾಲಯ. ಬಳ್ಳಾರಿ

When you desire to buy or sell

Houses & Sites

Govt. Loan Bonds

Shares of Companies

apply to

The Satyavadi Ltd., Mysore

VAIDYARATNAM

P. S. Varier's

Arya Vaidya Sala
Kottakkal

Branches — Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma Ceylon, Malaya and other colonies alone stands for itsunequalled reliability. All sorts of ayurvedic preparations prepared under scientific methods are always kept here in stock for sale Dhara, Navarakkizhi, Pizhichil and other special treatments of Malabar are conducted under Vaidyaratnam's own supervision. Treatment through correspondance a speciality. Vaidya ratnam vsits his Calicut branch on almost every 1 st and 3 rd Sundays and Palghat Branch on 2 nd and 4th Sundays.

CHYAVANAPRAS

From the time of ancient sages this medicine is reknownedfor its unequalled efficacy in retaining youthful ness. It is so termed because Sage Chyavan was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases. Direction — ½ to 2 tolas twice daily after food. Price per pound Rs 4.

For further particulars and free catologues pleaseapply to—

The Manager, Arya Vaidyasala,
KOTTAKAL (S.Malabar)

ಪ್ರಿಂಟಿಂಗ್ ವಿಚಾರದಲ್ಲಿ

ನಮ್ಮಲ್ಲಿ ಅಧಿಕ ಸೌಲಭ್ಯಗಳಿವೆ.

ಸತ್ಯವಾದಿ ಲಿಮಿಟೆಡ್,
ಚಾಮರಾಜಪುರಂ, ಮೈಸೂರು

ಮನೆ ಮತ್ತು ಸೈಟುಗಳನ್ನೂ
ಸರ್ಕಾರಿ ಸಾಲದಪತ್ರ ಮತ್ತು
ಕಂಪೆನಿ ಷೇರುಗಳನ್ನೂ

ಕೊಂಡುಕೊಳ್ಳುತ್ತೇವೆ ಮತ್ತು ಮಾರುತ್ತೇವೆ,
ಬೇಕಾದವರು ತಿಳಿಸಬಹುದು.

ಲೇಖಕರಿಗೆ ಸೂಚನೆ

ಚೆನ್ನಾಗಿರುವ ಕಥೆ, ನಾಟಕ, ತಾತ್ತ್ವಿಕ-ಲಿಕ ಮತ್ತು ದೇಶಹಿತದಾಯಕವಾದ ಲೇಖನಗಳು, ವಿನೋದ ವಿಚಾರ, ಮುಂತಾದವುಗಳನ್ನು ಕಳುಹಿಸಿದರೆ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ.

The Satyavadi Limited

(Incorporated in Mysore State)

M Y S O R E

A few shares of Rs. 5 are available

Edited, Printed & published by M .S. Krishna Rao, at the Satyavadi ress, Chamaraja Agrahar Mysore

ಸತ್ಯವಾದಿ

ಯುದ್ಧ

ಇಂಗ್ಲೆಂಡಿನ ಮೇಲೆ ಯುದ್ಧಮಾಡಡಲು ಇಂದಿನ ಪರಿಸ್ಥಿತಿಯಲ್ಲಿ ಹಿಟ್ಲರಿಗೆ ಕಷ್ಟವಾಗಿ ಕಂಡುಬಂದಿರುವದರಿಂದ ಅವನು ಅನ್ಯಮಾರ್ಗಗಳನ್ನು ಯೋಚಿಸುತ್ತಿರುವಂತೆ ಕಂಡುಬರುತ್ತದೆ. ಇವುಗಳು ಯಾವವಿರ ಬಹುದೆಂದರೆ—

1 ಸ್ಪೇನಿಗೆಸಹಾಯಮಾಡಿ ಜಿಬ್ರಾಲ್ಟರನ್ನು ಸಾಧಿಸಲು ಯತ್ನಿಸುವದು.

2 ಮಾಲ್ಟಾ, ಅಲೆಗ್ಜಾಂಡ್ರಿಯ ಏಡ್‌ಗಳ ಮೇಲೆ ಇಟ್ಲಲಿಯೊಂದಿಗೆ ಸೇರಿ ವಿಮಾನದಾಳಿಯನ್ನು ಮಾಡಿ, ಮೆಡಿಟರೇನಿಯರ್ ಪ್ರಾಂತ್ಯವೆಲ್ಲವನ್ನೂ ತಮ್ಮ ಸ್ವಾಧೀನವನ್ನು ಮಾಡಿಕೊಂಡು ಆ ಮಾರ್ಗವಾಗಿ ಬ್ರಿಟಿಷ್ ಹಡಗುಗಳ ಸಂಚಾರವಾಗದಂತೆ ಮಾಡುವದು.

3 ಜಪಾನು ಪೆಸಿಫಿಕ್ ಸಾಗರದಲ್ಲಿರುವ ಬ್ರಿಟಿಷ್ ಸ್ವಾಸ್ಥ್ಯಗಳ ಮೇಲೆ ದಾಳಿ ನಡೆಸುವಂತೆ ಮಾಡುವದು.

ಹೀಗೆ ಮಾಡುವದರಿಂದ ಇಂಗ್ಲೆಂಡಿನಲ್ಲಿ ಈಗ ಇರುವ ಸೈನ್ಯದ ಭಾಗಗಳನ್ನು ಈ ಮೂರು ಭಾಗಗಳಲ್ಲಿ ಹೋರಾಡಲು ಕಳುಹಿಸಬೇಕಾಗುವದು. ಆಗ ಇಂಗ್ಲೆಂಡಿನಲ್ಲಿ ಸೈನ್ಯವು ಕಡಮೆಯಾಗುವದರಿಂದ ಆಗ ಅವರ ಮೇಲೆ ಧಾಳಿ ನಡೆಸಲು ಯತ್ನಿಸುವದು. ರಷ್ಯವು ಯಾರೊಂದಿಗೂ ಸೇರದೆ ಪ್ರತ್ಯೇಕವಾಗಿರುವದರಿಂದಲೂ, ಅಮೆರಿಕವು ಇಂಗ್ಲೆಂಡಿಗೆ ಸಹಾಯ ಮಾಡಲೆಳಿಸಿದರೂ ಅಲ್ಲಿಂದ ಬರಲು ಕಾಲಹಿಡಿಯುವದಾದುದರಿಂದಲೂ, ಹಿಟ್ಲರನು ಅದಷ್ಟು ಜಾಗ್ರತೆಯಲ್ಲಿ ತನ್ನ ಬಯಕೆಯನ್ನು ತೀರಿಸಿಕೊಳ್ಳಲು ಮೇಲ್ಕಂಡಂತೆ ಪ್ರಯಶ್ನಗಳನ್ನು ಮಾಡುತ್ತಿರುವಂತೆ ಪತ್ರಿಕೆಗಳಿಂದ ತಿಳಿಯಬರುತ್ತದೆ. ಈ ಕ್ಲಿಷ್ಟಪರಿಸ್ಥಿತಿಯಲ್ಲಿ ಇಂಗ್ಲೆಂಡು ಏನು ಮಾಡಬೇಕಾಗುವದೆಂದರೆ—

1. ಯುದ್ಧವು ಸಂಪೂರ್ಣವಾಗಿ ಮುಗಿಯುವವರೆಗೂ ಈಗಿರುವ ಯಾವ ಸೈನ್ಯವನ್ನಾಗಲಿ ಇಂಗ್ಲೆಂಡಿನ ತೀರವನ್ನು ಬಿಟ್ಟು ಹೊರಗೆ ಕಳುಹಿಸಕೂಡದು.

2. ಈಜಿಪ್ಟಿನಲ್ಲಿ ಈಗಿರುವ ಸೈನ್ಯವು ಆಸ್ಟ್ರೇಲಿಯಾ, ನ್ಯೂಜೀಲೆಂಡು ಮೊದಲಾದ ದೇಶಗಳಿಂದ ಇನ್ನು ಮುಂದೆ ಬರುವ ಸೈನ್ಯದೊಂದಿಗೆ ಶತ್ರುವಿನೊಡನೆ ಹೋರಾಡಬೇಕು.

ಭೂಪಾಲನ ಇಸ್ಲಾಮಿಯ ಭವನದಲ್ಲಿ ಒಂದು ಸುರಂಗವೂ ಅದರಲ್ಲಿ ಒಂದು ರಸ್ತೆಯೂ ಕಂಡುಬಂದಿವೆ. ಆ ಸಂಸ್ಥಾನದ ಪ್ರಭುಗಳಲ್ಲಿ ಮುಖ್ಯರಾದ ದೋಸ್ತ್‌ಮಹಮದ್ ಖಾನ್ ರವರ ಕಾಲದಲ್ಲಿ ಈ ಸುರಂಗವು ನಿರ್ಮಾಣ ಮಾಡಲ್ಪಟ್ಟಿತೆಂದೂ ಈ ರಸ್ತೆಯು ಸದಿಯವರಿಗೂ ಹೋಗುವುದೆಂದೂ ತಿಳಿಯಬಂದಿದೆ.

ಅಮೇರಿಕಾದಲ್ಲಿಯು ಶಾಸ್ತ್ರಜ್ಞರು ಕುಟುಂಬಗಳ ವ್ಯವಹಾರವನ್ನು ಕುರಿತು ಪರಿಶೋಧನೆಗಳನ್ನು ಮಾಡಿ ಗಂಡಸರೇ ಹೆಚ್ಚಾಗಿ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುತ್ತಿರುವರೆಂದು ನಿರ್ಧರಿಸಿರುವರು. ವಿವಾಹಕ್ಕೆ ಮುಂಚೆಯೇ ಕುಟುಂಬಗಳ ಕಾರ್ಯಗಳು ಸುಲಭವಾಗಿ ನಡೆಯಬಲ್ಲವೆ ಎಂಬ ವಿಷಯವನ್ನು ನಿರ್ಣಯಿಸಲಿರುವರು.

ಡಾಕ್ಟರು, ಏಜೆಂಟರುಗಳು ಕೆಲಸಗಾರರು ಮನೆಗಳಲ್ಲಿ ಬಹಳ ಹೊತ್ತು ಇರಲು ಅವಕಾಶ ವಿಲ್ಲದಿರುವದರಿಂದ ಇವರಿಗೆ ಸುಖವು ಕಡಿಮೆಯೆಂದು ಅಮೆರಿಕದಪ್ರಮುಖರು ಭಾವಿಸಿರುವರು.

ಬೊಂಬಾಯಿಯಲ್ಲಿ ನಡೆದ ಅಖಿಲ ಕಮಿಟೀ ಸಮಾವೇಶಕ್ಕೆ ಶ್ರೀ ಗಾಂಧಿಯವರು ಬರುತ್ತಲೂ ಅಧ್ಯಕ್ಷರಾದ ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರವರು ಅವರನ್ನು ಆಲಿಂಗನೆ ಮಾಡಿಕೊಂಡು ತಮ್ಮ ಸಂತೋಷವನ್ನು ವ್ಯಕ್ತ ಪಡಿಸಿದರು. ಅಧ್ಯಕ್ಷರು ಎರಡು ನಿಮಿಷಗಳು ಆಲಸ್ಯವಾಗಿ ಸಭೆಗೆ ಬಂದಾಗಲಿ ಶ್ರೀ ಗಾಂಧಿಯವರು ಸಕಾಲಕ್ಕೆ ಬಂದಿದ್ದು ಅಧ್ಯಕ್ಷರು ಬರುತ್ತಲೇ ಎಳಲು ಯತ್ನಿಸಲು ಎಳಬೇಡಿರೆಂದು ಆಲಿಂಗನೆ ಮಾಡಿಕೊಂಡರೆಂದು ತಿಳಿಯ ಬಂದಿದೆ.

ಶ್ರೀ ದಾದಾಭಾಯಿ ನೌರೋಜಿಯವರ ಮೊಮ್ಮಗಳು ಸರಹದ್ದು ಪ್ರಾಂತ್ಯದಲ್ಲಿಯ ಗಲಾಟೆಗಳನ್ನು ತಪ್ಪಿಸಲಿಕ್ಕಾಗಿ ಬನ್ನೂ ಜಿಲ್ಲೆಯಲ್ಲಿ ಸಂಚಾರವನ್ನು ಪ್ರಾರಂಭಿಸಿರುವಳು. ಕಾಲು ನಡಿಗೆಯಲ್ಲಿ ಆಕೆಯು ಗ್ರಾಮಗಳಿಗೆ ಹೋಗಿ ಹಿಂದೂ ಮಹಮ್ಮದೀಯ ವೈಶಮ್ಯವು ಇಲ್ಲದಂತೆ ಮಾಡಲು ಪ್ರಯತ್ನಿಸುತ್ತಿರುವಳು.

ಬೊಂಬಾಯಿಯಲ್ಲಿ ದೊಡ್ಡಮಿಲ್ಲು ಯಜಮಾನರಾಗಿದ್ದ ಸರ್ ಎಕ್ಬರ್ ಸಾಸೂರವರು ಎರಡು ಬಿಲೆ ಬಾಳುವ ಮಾಣಿಕ್ಯಗಳನ್ನು ಬ್ರಿಟಿಷರಿಗೆ ಯುದ್ಧದ ಸಹಾಯಕ್ಕಾಗಿ ಕೊಟ್ಟಿರುವರು. ಅವುಗಳ ಬಿಲೆ ೧॥ ಲಕ್ಷ ರೂಪಾಯಿಗಳಾಗುತ್ತೆ

---

3 ಜಿಬ್ರಾಲ್ಟರ್ ಮತ್ತು ಸೂಯಿಜ್ ಕಾಲುವೆ ಇವು ಶತ್ರುವಶವಾಗದಂತೆ ನೋಡಿಕೊಳ್ಳಬೇಕು.

4 ಫೆಸಿಫಿಕ್ ಸಾಗರದಲ್ಲಿ ನಡೆಯಬಹುದಾದ ದಾಳಿಗಳನ್ನು ಪ್ರತ್ಯೇಕವಾಗಿ ಎದುರಿಸಲು ಅಮೇರಿಕಾವನ್ನು ಕೋರಿ, ಆ ಮೂಲ್ಕ ಜಪಾನಿನ ಬೆನ್ನಲಬನ್ನು ಮುರಿಯಬೇಕು. ಚೀನಾಕ್ಕೆ ಹೆಚ್ಚು ಸಹಾಯಮಾಡಿ ಆಕ್ರಮಣ ಕಾರ್ಯವನ್ನು ತದೆಗಟ್ಟಬೇಕು.

ವಿವಿಧ ವಿಷಯಗಳು

ಮಾಸ್ಕೋ ನಗರದ ಪ್ರಾಣಿ ಪ್ರದರ್ಶನ ಶಾಲೆಯಲ್ಲಿ ಈಗ 5500 ಪ್ರಾಣಿಗಳಿವೆ.

ನಾರ್ವೆ ರಾಜರಾದ ಹಾಕರ್‌ರವರೂ ಅವರ ಕುಟುಂಬವೂ ದೇಶಬಹಿಷ್ಕೃತರಾದಂತೆ ಭಾಸನಿಸಲ್ಪಟ್ಟಿರುವರು

ರಷ್ಯದ ಒಟ್ಟು ಜನಸಂಖ್ಯೆಯು 1939 ರಲ್ಲಿ ಆದ ಸೆನ್ಸಸ್ಸಿನ ಪ್ರಕಾರ ಒಂದನೂರ ಎಪ್ಪತ್ತುವರೆ ಮಿಲಿಯ. ಅವರಲ್ಲಿ ಸುಮಾರು 89 ಮಿಲಿಯ ಮಂದಿ ಹೆಂಗಸರು. ಜನಸಂಖ್ಯೆಯು ದಿನೇದಿನೇ ಹೆಚ್ಚುತ್ತಿದೆ.

ಇಟಲಿಯಿಂದ 5000 ವೈಮಾನಿಕರು ಮತ್ತು ಇತರ ಯುದ್ಧ ಕೆಲಸಗಾರರು ತಮ್ಮ ಯಂತ್ರ ಮೊದಲಾದ ಸಾಹಿತ್ಯಗಳೊಂದಿಗೆ ಜರ್ಮನಿಗೆ ಹೋಗಿದ್ದಾರೆ. ಜರ್ಮನಿಗೆ ವೈಮಾನಿಕರ ಕೊರತೆ ಬಿದ್ದದ್ದೇ ಇದಕ್ಕೆ ಕಾರಣವು.

ಬರ್ಮಾ ಬೀದಿಯನ್ನು ತೆರೆಯಬಾರದೆಂದು ಜಪಾನ್ ಸರ್ಕಾರದವರು ಬ್ರಿಟೀಷು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿರುವರೆಂದೂ ತಿಳಿಯುತ್ತದೆ. ಅಂತೂ ಜಪಾನಿನ ಈ ಕೃತ್ಯಗಳು ಮುಂದೆ ಏನೇನು ಮಾಡುತ್ತವೆಯೋ ದೇವರಿಗೇ ಗೊತ್ತು ?

ಯುದ್ಧದ ಬಗ್ಗೆ ಕಾಂಗ್ರೆಸ್ ದೋರಣವೇನೆಂಬುದನ್ನು ಜನತೆಗೆ ತಿಳಿಸಿಕೊಡಬೇಕೆಂದು ಸಂಯುಕ್ತ ಪ್ರಾಂತ ಕಾಂಗ್ರೆಸ್ ಸಮಿತಿಯವರು ನಿಶ್ಚಯಿಸಿದ್ದು ಈ ಕಾರ್ಯಕ್ಕೆ ಪಂ || ಜವಹರಲಾಲ, ವಿಜಯಲಕ್ಷ್ಮಿ ಪಂಡಿತ್, ಸಂಪೂರ್ಣಾನಂದ, ಗೋವಿಂದವಲ್ಲಭಪಂತ್ ಈ ಮುಖಂಡರು ಸಂಚರಿಸುತ್ತಾರೆಂದು ತಿಳಿಯುತ್ತದೆ.

ಭುಲಾಬಾಯಿ ದೇಸಾಯಿ ಮತ್ತು ಬ್ಯಾ| ಅಸಫ ಆಲಿಯವರು, ಆ. ಭಾ. ಕಾ. ಸಮಿತಿಯವರ ತೀರ್ಮಾನದಂತೆ ಪೇಶಾವರಕ್ಕೆ ಹೋಗಿರುವರು. ವಜಿರಸ್ಥಾನಕ್ಕೆ ಹೋಗಲು ತಮಗೆ ಅಪ್ಪಣೆ ಕೂಟ್ಟರೆ ಅಲ್ಲಿನ ಜನರಲ್ಲಿ ಸೌಹಾರ್ದಭಾವನೆಗಳನ್ನುಂಟುಮಾಡಲು ಪ್ರಯತ್ನಿಸುತ್ತೇವೆಂದು ಇವರ ಆಸೆ. ಆದರೆ ಗವರ್ನರ್ ಸಾಹೇಬರು ಇವರಿಗೆ ಅಪ್ಪಣೆ ಕೊಡಲಿಲ್ಲ.

ಅಮೇರಿಕ ನೌಕಾ ಮಂತ್ರಿಗಳಾದ ಕರ್ನಲ್ ನಾಕ್ಸ್ ಇವರು ತಾ|| 5-10-40 ರಲ್ಲಿ ಭಾಷಣಮಾಡುತ್ತಾ—ಅಮೇರಿಕವನ್ನು ಯಾರಾದರೂ ಕೆಣಕಿದರೆ ನಮ್ಮ ನೌಕಾಪಡೆ ಮತ್ತು ಸೈನ್ಯಗಳು ಅವರನ್ನು ಎದರಿಸುವವು. ಅಮೆರಿಕವನ್ನು ಬೆದರಿಸುವದಕ್ಕಾಗಿ ಮೂರು ರಾಷ್ಟ್ರಗಳು ಒಪ್ಪಂದವನ್ನು ಮಾಡಿಕೊಂಡಿವೆ. ಆದರೆ ಈ ರೀತಿ ಬೆದರಿಕೆಗಳಿಗೆ ಅಮೆರಿಕವು ಅಂಜಲಾರದು. ಯುದ್ಧ ಮಾಡುವ ಪ್ರಸಂಗಬಂದರೆ ನಾವು ಅದಕ್ಕೆ ಸಿದ್ಧರಾಗಿರುತ್ತೇವೆ. ಹೆಚ್ಚಾಗುತ್ತಿರುವ ಯೂರೋಪಿನ ಸರ್ವಾಧಿಕಾರಿಗಳ ಹಾವಳಿಗೆ ನಾವು ತಡೆಯಾಗಿರುತ್ತೇವೆ. ಈ ಹಾವಳಿಯನ್ನು ಬ್ರಿಟನ್ನು ತಡೆಯದಿದ್ದರೆ ಅದು ನಮ್ಮನ್ನೂ ಸಹ ಸುತ್ತುತ್ತದೆ ಎಂದು ಹೇಳಿದರು.

ವಿನೋದಲಹರಿ

ಒಬ್ಬ ಸಾಬಿ—ಒಂದ್ ಕಪ್ಪು (cup) ಹಾಲು ಕೊಡಿ ಸಾಮಿ.

ಮಾಣಿ—ಹಾಲು ಬೆಳ್ಳಗಿರುತ್ತೆ, ಕಪ್ಪು ಹಾಲು ಎಲ್ಲಿ ತರಲಿ.

ಂ ಂ

ಪದ್ಮ—ಭಾವಾ ನೀನು MAD.

ಭಾಮ—ಅಲ್ಲ ನಾನು MA.

ಪದ್ಮ—ನೀನು ನೆನ್ನೆ ರಾತ್ರಿ ಅಕ್ಕನ ಜೊತೇಲಿ ನೀರಳೆ ಹಣ್ಣನ್ನು ನೋಡಿ ಕರೀದ್ರಾಕ್ಷಿ ಅಂದ್ರಲ್ಲ ಅದಕ್ಕೆ ನಿಂಗನ್ನೋದು MAD ಅಂತ.

ಂ ಂ

ರಾಯ್ರು—ಏನೋ Stick No Bills ಅಂತ ಬೋರ್ಡ್ ಹಾಕಿದ್ದೂ ಗೋಡೆ ಮೇಲೆ ಕೊ ನೋಟೀಸ್ ಅಂಟಿಸ್ದೆ.

ಅವನು—ಹೌದು ಬುದ್ಧಿ ನಾನು ಅಂಟ್ಸಿದ್ದು ಗೋಡೇ ಮೇಗೆ ಬೋರ್ಡಿನ ಮೇಕಲ್ಲ.

ಂ ಂ

ಒಬ್ಬ—ಲೋ ನಿಂಬು, ಅಲ್ನೋಡು ಆ ಲಾಯರ್ ಮನೇಲಿ ರೇಡಿಯೋ ಹಾಕ್ತಿದ್ದಾರೆ ಕೋಳೋಣ ನಡಿ.

ನಿಂಬು—ಆಗ್ಲೆ ಕೇಳ್ದೆ ಕಣೋಮ್ಮ "ಹೋಗೋ ನೀ ಯಾವ ಆಪ್ಪರ ಮೊಮ್ಮಗ ಕೊಡಲ್ಲಾ ಹೋಗು ಅಂದ್ರು.

ಂ ಂ

ಒಬ್ಬ—ಮನೇಗೆ ಬೆಂಕಿ ಬಿದ್ದಿದ್ರೂ ನೋಡ್ತಾ ಕೂತಿರ್‌ಬಹ್ದೊ.

ಮತ್ತೊಬ್ಬ—ಹೋಗ್ಲಿ ಕಣ್ಣುಮುಚ್ಚಿಕೋತೇನೆ ಸುಮ್ನಿರು ಮಹಾರಾಯ.

ಂ ಂ

ಶೆಟ್ಟ—ಪ್ರಿಯೆ ಎಲ್ಲಿ ಒಂದು ಮುತ್ತು ಕೊಡು.

ಅವನ ಹೆಂಡತಿ—ಪ್ರಿಯ ಆಗ್ಲೆ ಮರ್ತುಬಿಟ್ರಾ ಈ ವಾರ ಗಲಾಟೇಲಿ ಮುತ್ತಿನ ಖರೀದಿ ಜಾಸ್ತಿ ಆಗಿದೆ ಅಂತ ರಾತ್ರೆ ತಾನೆ ಹೇಳಿದ್ರಿ, ಮತ್ತೆ ಸುಮ್ನೆ ಖರ್ಚು ಮಾಡಿಸ್ಬೇಡಿ, ಅದೇ ಮುತ್ತನ್ನು ಯಾರಿಗಾದ್ರೂ ಕೊಟ್ಟರೆ ದುಡ್ಡು ಸಿಕ್ಕುತ್ತೆ:

ಂ ಂ

ರಾಯ್ರು—ಪೇಟೇಗೋಗ್ಬೇಕು ಅಂದ್ರೆ ಯೋಚ್ನೆಮಾಡ್ತಿದ್ದೀ ಮಲ್ಲಾ.

ಕೂಲಿಯವ್ನು—ಅದು ಸರಿ ಬುದ್ಧಿ, ದೊಡ್ಡ ಪೇಟೆಗೋ, ಚಿಕ್ಕಪೇಟೇಗೋ ಅಂತ.

ರಾಯ್ರು—ದೊಡ್ಡಪೇಟೆಗೆ.

ಕೂಲಿಯವ್ನು—ಅಂಗಿದ್ರೆ ನಡೀರಿ ಬುದ್ಧಿ.

ಂ ಂ

ಎಂ. ಕೆ. ಅನಂತರಾಜು,
ಕಿಲ್ಲೇ ಮೋಹಲ್ಲಾ, ಮೈಸೂರು.

ಮಗು—ಅಮ್ಮ ಅಪ್ಪ ಏನಾಗಿದ್ರು?

ತಾಯಿ—ಅವ್ರು ಸತ್ತೋಗಿದ್ದಾರೆ ಮಗು.

ಮಗು—ಅದು ಸರಿ, ಸಾಯೋಕ್ಕಂಚೆ ಏನಾಗಿದ್ರು ಅಂತ.

ತಾಯಿ—ಸತ್ಯವಾಗಿ ಬದುಕಿದ್ರು ಮಗು.

ಂ ಂ

ಹೆಂಡ್ತಿ—ನವರಾತ್ರೆ ಬಂತು ಒಂದು ಸೀರೇನೂ ತರೊದಿಲ್ವಲ್ಲಾ!

ಗಂಡ—ಅದಕ್ಕೇನೇ, ನೆರೆಮನೆಯವರ ಹತ್ತಿರ ನಿಮ್ಮನೆಗೆ ನಾನೇ ಮುತ್ತೈದೆಯಾಗು ಏನೆಂದು ಹೇಳು! ಪುಗ್ಸಟ್ಟೆ ಸೀರೆ ಕಣಸಿಕ್ಕುತ್ತೆ.

ಂ ಂ

ಅಂಬಳೆ ಪಂಡಿತರು ಮುದುಕರಾಗಿದ್ದರು. ಇವರಿಗೆ ಕಿವಿ ಕೇಳಿಸುತ್ತಿರಲಿಲ್ಲ ಇವರು ಒಂದು ದಿನ ಮನೆಯ ಮುಂದೆ ಕುಳಿತು ನಶ್ಯ ಹಾಕಿಕೊಳ್ಳುತ್ತಿದ್ದರು. ಅಷ್ಟು ಹೊತ್ತಿಗೆ ನೆರೆಮನೆ ಶಾಸ್ತ್ರಿಗಳು ನಶ್ಯಕ್ಕಾಗಿ ಬಂದರು. ಅಂಬಳೆ ಪಂಡಿತರು ಕೈಲಿದ್ದ ನಶ್ಯವನ್ನು ಅಲ್ಲೇ ಹಾಕಿ—ಶಾಸ್ತ್ರಿಗಳೆ! ಒಂದು ಚಿಮ್ಟೆ ನಶ್ಯ ಕೊಡ್ರೀ! ನಶ್ಯವಿಲ್ಲದೆ ಸುವ್ಮನೆ ಬೂರುಡೆ ಹಿಡಿದುಕೊಂಡಿದ್ದೀನಿ ಅಂದರು.

ಶಾಸ್ತ್ರಿಗಳು ಕಕ್ಕಾಬಿಕ್ಕಿಯಾಗಿ ಮಾತಾಡದೆ ಮನೆಗೆ ಹೋದರು.

ಂ ಂ

ಗುರು—ಆರು ಪ್ರಯತ್ನ ಮಾಡಯ್ಯಾ! ಖಂಡಿತ ಪಾಸಾಗ್ತೀ!

ಶಿಷ್ಯ—೬ ಪ ಯತ್ನ ನಾನು ಮಾಡ್ತೇನೆ! ಆರನೇದು ಖಂಡಿತ ನೀವು ಮಾಡ್ತಿರೆನ್ನಾರ್!

ಂ ಂ

(ಭೀಮರಾಯರು ರಾಮರಾಯರ ಮನೆಗೆ ಬಂದರು)

ರಾಮರಾಯರು—ಕುರುಡು ಬಿಕ್ಕು!

ಭೀಮರಾಯರು—ನೀವು ಕರೀ ಬೇಕ್ಕು.

ರಾ. ರಾಯರು—ಏನ್ರೀ! ಕುರುಡು ಬಿಕ್ಕು ಹಾಗೆ ಹೀಗೇಂತ ಹೇಳ್ತಿರೀ.

ಭೀ. ರಾಯರು—ನೀವೇನೆಂದ್ರಿ ಸ್ವಾಮಿ?

ರಾ. ರಾಯರು—ಕುಳಿತುಕೊಳ್ಳಬೇಕು, ಅಂದೆ.

ಭೀ. ರಾಯರು—ಓಹೋ ಹಾಗೊ! ನಾನು ನೀವ್ತು ಕರೆಯ ಬೇಕೂಂದೆ ಇದ್ರು ಅಚ್ಚಾ ಹಳೆಗನ್ನಡ.

ಂ ಂ

ಒಬ್ಬಾತ—ನೀನು ಮೆಡ್ರಾಸ್‌ಗೆ ಹೋದೆಯಲ್ಲಾ! ಟ್ರೈನಿನಲ್ಲಿ ಯಾರಾದರೂ ಲೇಡಿಸ್‌ನ್ನು ನೋಡಿದೆಯಾ?

ಮತ್ತೊಬ್ಬಾತ—ನಾನು ಕೂತಿದ್ದದ್ದು ಲೇಡೀಸ್ ಕಂಪಾರ್ಟುಮೆಂಟೇ ಆಗಲಿ, ನಾನು ಕೊಂಡುಕೊಂಡಿದ್ದದ್ದು 3 ನೆಯ ತರಗತಿಯ ಟಿಕೆಟ್ಟು.

ಎಂ. ವೆಂಕಟಾಚಲಭಟ್ಟ,
ಮುಳುಬಾಗಿಲು ಮಠ.

ಗೀತಾ ಸ್ವರೂಪ

(ಗೀತಾ ಪ್ರೇಮಿ)

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

"ಹೋಗುತ್ತಾ ಬರುತ್ತಾ ಇರುವುವು ಎರಡು, ಹೋದರೆ ಬಾರದೆ ಇರುವವು ಎರಡು ಬಂದರೆ ಹೋಗದೆ ನಿಲ್ಲುವವು ಎರಡು ಎಂಬುದಾಗಿ ಇರುವದರ ಅರ್ಥವನ್ನು ತಿಳಿದು ಎಚ್ಚರಿಕೆಯಿಂದ ನಡೆದುಕೊಂಡರೆ ನೀವು ಸುಖವಾಗಿ ಬಾಳುತ್ತೀರಿ. ತಪ್ಪಿ ನಡೆದರೆ ನಿವ್ವಿಗೆ ಆಸ್ತಿಯು ನಾಸ್ತಿ, ಸುಖವು ನಾಸ್ತಿ, ದುಃಖವೇ ಜಾಸ್ತಿಯೆಂದಿತ್ತು.—ಮಕ್ಕಳು ಇದರ ಅರ್ಥವನ್ನು ಎಷ್ಟು ಸಲ ಓದಿದರೂ ತಿಳಿದುಕೊಳ್ಳಲಾರದೆ ಕೊನೆಗೆ ರಾಜರ ಆಸ್ಥಾನದಲ್ಲಿರುವ ಪಂಡಿತರ ಮುಂದೆ ಇಟ್ಟು ಅರ್ಥವನ್ನು ತಿಳಿಸಬೇಕೆಂದು ಕೇಳಿಕೊಂಡರು. ಆಗ ಅವರಲ್ಲಿ ಒಬ್ಬ ಪಂಡಿತರು:—1 ನೇದು ಸಿರಿತನ ಬಡತನವೆಂತಲೂ, 2 ನೇದು ಪ್ರಾಣ ಮಾನವೆಂತಲೂ, 3 ನೇದು ಕೀರ್ತಿ, ಅಪಕೀರ್ತಿಯೆಂತಲೂ ತಿಳಿಸಿದರು.—ಮುಖ್ಯವಾಗಿ ತಾಯಿತಂದೆಗಳು ಮಕ್ಕಳ ವಿಚಾರದಲ್ಲಿ ಗಮನಿಸಬೇಕಾದ ವಿಚಾರವೊಂದನ್ನು ತಮ್ಮಗಳ ಅವಗಾಹನೆಗೆ ತಂದಿರುತ್ತೇನೆ. ತಂದೆತಾಯಿಗಳು ಮಕ್ಕಳು ಕೆಡದಂತೆ ಮಾಡುವುದು ಅವರ ಕರ್ತವ್ಯವಾಗಿರುತ್ತೆ. ಅದರಲ್ಲೂ ಮಕ್ಕಳಿಂದ ತನುಗೂ, ತಮ್ಮವರಿಗೂ, ತಮ್ಮ ದೇಶಕ್ಕೂ, ತಮ್ಮ ರಾಜರಿಗೂ, ತಮ್ಮ ಜನಾಂಗಕ್ಕೂ ಯಶಸ್ಸು ಬರುವಂತೆ ಶಿಕ್ಷಣೆಯನ್ನು ಕೊಡಬೇಕು. ಮಕ್ಕಳನ್ನು ದಂಡಿಸುವ ಕಾಲದಲ್ಲಿ ಮುದ್ದುಮಾಡಿಕೊಂಡು ತಾಯಿಯಾದವರು ಅಡಿ ಮಾಡಬಾರದು. ಹ್ಯಾಗೆಂದರೆ—"ಹೊಡೆಯದೆ ನುಡಿಯದೆ ಮಕ್ಕಳ ಕಡುಮೋಹವ ಮಾಡಿಕೊಂಡು ಗಂಡನ ಜರಿವಳ್ ಒಡವೆಗಿಗೊಳದುಂತೂ ಸುಂ ಬಡವಾದುದೂ ಎಂಬ ತಾಯಿ ಜನ್ಮ ಮೃತ್ಯು ಎಂದು ನೀತಿಯಿರುತ್ತೆ"—ಹೆಚ್ಚಾಗಿ ಸಮಸ್ತವಾದ ನೀತಿಧರ್ಮಗಳೂ ಎಲ್ಲವೂ ಈ ಗೀತಾಮೃತವನ್ನು ಸಾನಮಾಡಿದ್ದಕ್ಕೆ ಫಲಿತಾಂಶವಾಗಿ ಸರ್ವರೂ ರಾಗದ್ವೇಷವನ್ನು ಬಿಟ್ಟು ಸೌಜನ್ಯ ಸೌಹಾರ್ದ್ರ ಭಾವಗಳಿಂದ ಇಹಲೋಕ ವ್ಯಾಪಾರವನ್ನು ನ್ಯಾಯದಿಂದ ವರ್ತಿಸುವರೆಂದು ನಂಬಿರುತ್ತೇನೆ.

ಈ ಲೋಕದಲ್ಲಿಯೇ ಇದ್ದುಕೊಂಡು ಮಾಡಬೇಕಾದ ಕರ್ತವ್ಯವನ್ನು ಮಾಡದೆ ಹೋದರೆ ಉಭಯ ಲೋಕದ ವಿಭ್ರಷ್ಟತೆ ಪ್ರಾಪ್ತವಾಗುತ್ತೆ. ವಿತರಣೆ ಇಲ್ಲದೆ ಹಣವನ್ನು ಸಂಪಾದಿಸಿ ನಿದ್ರಾಹಾರಗಳಲ್ಲಿ ಅಂದರೆ ಅಸುರಿಸಂಪತ್ತಿನಲ್ಲಿ ಕಾಲವನ್ನು ಕಳೆದರೆ ಸಜ್ಜನರೂ ಮೆಚ್ಚರು ಪರಮಾತ್ಮನು ಮೆಚ್ಚನು. ಆದುದರಿಂದ ಗೀತಾಪ್ರೇಮಿಗಳು ತಮ್ಮ ಜನ್ಮ ಸಾರ್ಥಕವಾಗುವ ರೀತಿಯಲ್ಲಿ ಅವರವರ ಕೈಲಾದ ಮಟ್ಟಿಗೆ ನಡೆದುಕೊಳ್ಳುವಂತೆ ನಮ್ಮೆಲ್ಲರಿಗೂ ಶ್ರೀಕೃಷ್ಣ ಪರಮಾತ್ಮನು ಅನುಗ್ರಹಿಸಲಿ."

ನಮ್ಮ ನಿಮ್ಮ ಮಾತು

——

ಒಂದು ಸಲ ಹೊಟೇಲಿಗೆ ಹೋಗಿದ್ದೆ. ಅರ್ಧ ಕಪ್ಪು ಹಾಲು ಕೊಡು ಅಂದ್ರೆ. ಹಾಲು ಬೆಳ್ಳಗಿರುತ್ತೆ ಕಪ್ಪು ಹಾಲು ಎಲ್ಲ ತರಲಿ ಅಂದ್ ಬಿಡೋದೆ ಆ ಕಿಲಾಡಿ ಮಾಣಿ.

ಂ ಂ ಂ

ಒವ್ಮೆ ಒಂದು ಸಿನೀಮಾಕ್ಕೋಗಿದ್ದೆ ಟಿಕೇಟ್ ಆಫೀಸಾಸತ್ರ ಒಂದು ಸಣ್ಣ ದಂಗೆ (ಗಲಾಟೆ) ನಡೀತಿತ್ತು ಇದೇನಪ್ಪಾ ಅಂತ ಕೇಳಿದ್ರೆ ಟಿಕೇಟ್ ಆಫೀಸ್ ಅಂದ್ ಬಿಡೋದೆ ಒಬ್ಬ ಬಿಧೀಮ.

ಂ ಂ ಂ

ದಾರೀಲಿ ಹೋಗ್ತಿದೆ, ಒಂದ್ ಮರದ ಕೆಳಗೆ ಒಬ್ಬ ಸುರಭಕ್ಕ ಹೆಂಡಾ ಕುಡಿತಿದ್ದ. ನಾ ನಿದ್ದವ್ನು ಹೆಂಡ ಕುಡಿಬೇಡ ಅಂದ್ರೆ, ಹೋಗ್ಲಿ ಹೆಂಡ ಕೊಡ್ಸೋದಿಲ್ಲ, ಇನ್ ಮೇಲೆ ಸಾರಾಯೀನೇ ಕುಡಿತೀನಿ ದುಡ್ಡು ಕೊಡಿ ಅಂತ ನನ್ನನ್ನೇ ಕೇಳ್ಬಿಡೋದೆ.

ಂ ಂ ಂ

ಒಂದು ಸಲ ದಾನಶೂರ ಕರ್ಣನ ನಾಟಕ ನೋಡುವ್ರದಕ್ಕೆ ಹೋಗಿದ್ದೆ. ಕೃಷ್ಣ ಇದ್ದವ್ರು ಅಯ್ಯಾ ಕರ್ಣ ಏನಾದರೂ ದಾನ ಕೊಡಪ್ಪಾ ಅಂದ್ರೆ, ವೂಜ್ಯರೆ ಈ ರಿಷ್ಟ್‌ವಾಚ್ ತೆಕೊಳ್ಳಿ, ಬೇಕಾದ್ರೆ ಈ ಸಿಗ್ರೇಟ್‌ಪ್ಯಾಕನ್ನೂ ತಕ್ಕೊಂಡ್ಬಿಡಿ ಅನ್ನೋದೆ ಆ ಕಲಿಯುಗದ ಕರ್ಣ.

ಂ ಂ ಂ

ಒಬ್ಬ ಮೇಷ್ಟ್ರು ಗಲಾಟೆ ಮಾಡುತ್ತಿದ್ದ ಹುಡುಗನನ್ನು ಕುರಿತು "ನಿನ್ಗೇನೋ ಬಂದಿದೆ ಧಾಡಿ ಗಲಾಟೆ ಮಾಡ್ತಿದ್ದಿ ಅಂದ್ರೆ ಆ ಪೋಕರಿ ಹುಡ್ಗ ಗಲ್ಲವನ್ನು ಮುಟ್ಟಿ ನೋಡ್ಕೊಂಡು ನನಗಿನ್ನೂ ಗಡ್ಡಾನೇ ಬಂದಿಲ್ವಲ್ಲಾ ಸಾರ್ ಅನ್ನೋದೆ.

ಂ ಂ ಂ

ಗಂಡ ಇದ್ದವ್ನು ಹೆಂಡತೀನ ಕುರ್ತು ಅಲ್ವೆ ಅವರ್ ವಿಸೆಗೆ ಏಕೆ ಹೋದೆ, ನಾನವತ್ತೇ ಹೇಳ್ಲಿಲ್ವೆ ಹೋಗ್ಬೇಡ ಅಂತ ಕೇಳಿದ್ರೆ, ನಾನವತ್ತೆಲ್ಲಿ ಹೋಗಿದ್ದೇಂದ್ರೆ, ಇದೇ ತಾನೆ ಹೋಗ್ಬಿಟ್ಟು ಬಂದೆ ಅನ್ನೋದೆ ಆ ಗಯ್ಯಾಳಿ!

ಂ ಂ ಂ

ನಂ ಡಾಕ್ಟ್ರು ಇದ್ದವ್ರು ಹೊಸ ಪೇಸಂಟನ್ನು ಕುರ್ತು, ಈಗ ಹೇಗಿದ್ಯಪ್ಪ ನನ್ ಔಷಧಿತಿಂದ್ ಮೇಲೆ ಅಂತ ಕೇಳಿದ್ರೆ, ಆ ಪಟಿಂಗ ಇದ್ದವ್ನು, ಇನ್ನೇನು ನನ್ನ ಹೊತ್‌ಕೊಂಡು ಹೋಗೊದೊಂದೆ ಬಾಕಿ ಅನ್ನೋದೆ.

ಂ ಂ ಂ

ದಾರೀಲಿ ಹೋಗ್ತಾ ಒಬ್ಬ ವಿದ್ಯಾರ್ಥಿ ಒಬ್ಬ ಗೌಡನನ್ನ ಕುರ್ತು, ಏನೋ ಮಿಷ್ಟರ್ ಅಂದ್ರೆ, ಆ ಭೂಪ, ವ ನಿಮ್ಮಪ್ಪಣೋ ಮಿಷ್ಟರ್, ನಾಯಾಕಾಗ್ಲಿ ಮಿಷ್ಟರ್ ಅಂದ್‌ಬಿಡೋದೆ.

ಎಂ. ಕೆ. ಅನಂತರಾಜು,
ಕಿಲ್ಲೇವೋಹಲ್ಲಾ. ಮೈಸೂರು.

ಅಸ್ಪೃಶ್ಯ

——

ನಾನ್ಯಾರು, ನೀನ್ಯಾರು
ಎಂಬ ತಿಳಿವಳಿಕೆ;
ನಾ ಶ್ರೇಷ್ಠ, ನೀ ನೀಚ
ಎಂಬ ಈ ಹೋಲಿಕೆ;
ಜಾತಿ ಮತ ಕೋಮುಗಳ
ಭೇದಭಾವನೆಗಳನು
ಹೇ ದೇವ! ಈ ಜಗದ ಜನಕೆ
ನೀ ಪೇಳ್ಕೊಟ್ಟಿರುವೆಯಾ?
ಈ ನಿನ್ನ ಈ ನರಸೃಷ್ಟಿ
ಭೇಧ ಭಾವನೆಯ ಡೃಷ್ಟಿ,
ಮನುಜರಲ್ಲದೆ ತಾನು,
ನಿನ್ನಲ್ಲಿಯೂ ಮೂಡಿಹುದೆ?
ಅಕಟಕಟ ಈ ಜಗದಲಿ
ನಾವಾವ ಪಾಪವ ಗೈದಿಹೆವೆವು?
ಜನ್ಮದಿಂ, ಜನ್ಮಕ್ಕೆ ಕಾಣ್ವ
ತೊಡಕಿನ ಜೋಲು ರಾಶಿ,
ಎಮ್ಮ ಬೆನ್ನನ್ನಲಗದೆ
ಎಲ್ಲ ಕರ್ಮದ ವಿಧಿಯು
ಎಮ್ಮ ಪಾಪದ ಗಣಿಯು
ಎಮ್ಮನನು ಹಿಂಬಾಲಿಸಿ
ಬಿಡಲೊಲ್ಲದು ತಾನು
ಬೆನ್ನೆ ಹತ್ತಿಹುದು
ನರಕ ಕೂಪದಲಿ
ನರಳುತಿವೆವು ನಕವು
ನರಿನಾಯಿಗಳ ಕೇಳಾಗಿ
ಎಸೆಗುತಿವೆವು ವಿಶ್ವದಲಿ
ಸಿರಿವಂತ ಬಲ್ಲಿದನ
ಧರ್ಮಕಟ್ಟಿನ ಎದುರಿ
ನನ್ನ ಗಣನೆ ಎಷ್ಟು ಎಲ್ಲಿ?
ಅವೆಲ್ಲ ಬರಿ ಕೀಳು ಕಸದಲ್ಲಿ
ದುಃಖದ ರಾಶಿಯಲಿ
ಬಳಲಿ ಬೆಂಡಾಗಿ,
ಕಂಬನಿಯ ಸುರಸಿ
ಬಾಡಿ ಕಂಗಾಲಾಗಿ
ಜೀವನದ ಲಹರಿಯಲಿ
ಒಮ್ಮೆ ಕಾಣಿಲವು ಸೌಖ್ಯ
ಜೀವನದ ಮರುಭೂಮಿಯಲಿ
ಕಾಣುವೆವು ಮರೀಚಿಕವ
ನೀನ್ಯಾರು ನಾನ್ಯಾರು
ನಾ ಮನುಜ ನೀ ಹೊಲಯ
ಎಂಬ ಭೇದಭಾವನೆ ಹೊರ್ತು
ತನ್ನನ್ನು ತಾನು ಅರಿಯಲಾರ
ಏ ಮನುಜ ಬಲ್ಲಿದನೆ
ನಿನ್ನನ್ನು ಆ ಪಿರಿದೇವ
ನನ್ನನ್ನು ಆವ ಕಿರಿದೇವ
ಬೇರೆ ದೇರೆ ಸೃಷ್ಟಿಸಿಹನೆ?
ನಿನ್ನ ನನ್ನಲ್ಲಿಹುದು ಆವಭೇಧ?
ರಕ್ತಮಾಂಸವನಿತ್ತು
ನಿನ್ನನನು ಮನುಜನ ಮಾಡಿ
ನನ್ನನ್ನು ತೊರೆದನೆ?

ನಿನ್ನ ಮನದಲ್ಲಿಹುದು
ಭೇದ ಭಾವನೆಯ ಬೀಜ
ಇದನು ದೇವನು ನಿನ್ನ
ಒಡಲಲ್ಲಿ ಬಿತ್ತಿಹನೆ?
ಎಲೆ ಮನುಜ ತಿಳುಹು
ಕಾಯ್ಬೇರೆ ಹಣ್ಬೇರೆಯೆ!
ಕಾಯಿನಲ್ಲವೆ ಅಯ್ಯು ಹಣ್ಣು,
ಆಡನಲ್ಲವೇ ನೀ ಅಪೇಕ್ಷಿಪುದು
ನಾ ಬೇರೆ ನೀ ಬೇರೆ ಎಂಬ
ಮೂಢಭಾವನೆಯನು
ಮನದಿಂದ ಹೊಡತೊರೆದು
ಎಮ್ಮನನು ನಿಮ್ಮೊಡನೆ ಕಲೆಸು
ಸಕಲ ಲೋಕದ ನರರು
ಆ ಸರ್ವೇಶನ ಮಕ್ಕಳು
ನಾವೆಲ್ಲ ಜೊತೆ ಒಡನಾಡಿಗಳು
ದೇಶದೇಳಿಗೆಯ ಬಾಲರು
ಒಬ್ಬನನು ಒಬ್ಬನು
ದೂಷಿಸುವುದು ಒಳ್ಳಿತಲ್ಲ
ಒಬ್ಬನನು ಒಬ್ಬನು
ಕಲೆತು ಬೆಳೆಸು ಪ್ರೀತಿಯನು

ಎಸ್. ರಾಮಕೃಷ್ಣ,
ಜೂ. ಇಂಟರ್ ಆರ್ಟ್ಸ್, ಮೈಸೂರು.

ಫೇಮಸ್ ಕಾಂಪಿಟಿಷನ್ ಉತ್ತರ

ಸೀಲು ಮಾಡಿಟ್ಟಿದ್ದ ಉತ್ತರ

ಎಡದಿಂದ ಬಲಕ್ಕೆ—1 ಸುಹಾರಾಜ 5 ನಲುಮೆ 7 ಸವಾನ 9 ಖ್ಯಾತಿ 11 ವಿಮೆ 12 ಶೃಂಗಾರ

ಮೇಲಿನಿಂದ ಕೆಳಕ್ಕೆ —1 ಮನವ 2 ಹಾಲು 3 ರಾಮೆ 4 ವಿಭು 6 ಸ್ನಾನ 7 ಸತಿ 8 ಮಾಲೆಗಾರ 10 ವನಜ 11 ವಿಧಿ

ಮ್ಯಾ. ಫೇ. ಕಾಂ.

ಯುದ್ಧಕ್ಕೆ ಸಂಬಂಧಿಸಿದ ವಿಷಯ

ಈ ವರೆಗೆ ನಡೆದಂಥ ಚೀನ ಜಪಾನ ಯುದ್ಧದಲ್ಲಿ ಇನ್ನು ಮುಂದೆ ಬಹು ತೀವ್ರವಾಗಿಯೇ ಬ್ರಿಟನ್ ಅಮೇರಿಕಾ, ರಷಿಯಾ ಮತ್ತು ಚೀನ ಇವೆಲ್ಲವುಗಳು ಒಂದುಗೂಡಿ ಜಪಾನನ್ನು ಎದುರಿಸುವಂಥ ಪ್ರಸಂಗವು ಬೇಗನೆ ಬರುವಡಿದೆ. ಮತ್ತು ಇದು ರಾಕ್ಷಸೀ ಯುದ್ಧವಾಗಿ ಪರಿಣಮಿಸಬಹುದು. ಎಂದು ಚೀನೀ ಜನರು ಅಭಿಪ್ರಾಯ ಪಡುತ್ತಿದ್ದಾರೆ. ಮತ್ತು ಇದು ಇಂದಿನ ಯೂರೋಪು ಮಹಾಯುದ್ಧದ ಒಂದು ಅಂಗವಾಗಿ ಏಷ್ಯಾದಲ್ಲಿಯೇ ದೊಡ್ಡ ಪ್ರಮಾಣದಿಂದ ಹರಡಬಹುದೆಂದು ಇವರು ತಿಳಿದಿರುತ್ತಾರೆ

ಂ ಂ

ಜರ್ಮನ್ ವಿಮಾನಗಳು ಏರ್ಲೆಂಡಿನ ಮೇಲೆ ದಾಳಿ ಮಾಡಿದವಂತೆ. ಈ ಬಗ್ಗೆ ಜರ್ಮನ್ ಸರಕಾರದವರು ಏರ್ಲೆಂಡು ಸರ್ಕಾರಕ್ಕೆ ಕ್ಷಮೆ ಬೇಡಿ, ಈ ಬಗ್ಗೆ ಉಂಟಾದ ನಷ್ಟವನ್ನು ತುಂಬಿಕೊಡಲು ಒಪ್ಪಿಕೊಂಡಿದ್ದಾರೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ
ದಿವಾರವರು ಮಾಡಿದ ಭಾಷಣದಲ್ಲಿ

ಶ್ರೀಮನ್ಮಹಾರಾಜರವರು

ಶ್ರೀ ಜಯಚಾಮರಾಜ ಒಡೆಯರವರನ್ನು
ಪ್ರಶಂಸಿಸಿ ಹೀಗೆ ಹೇಳಿದ್ದಾರೆ—

ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರು ಚಿರಕಾಲ ಬಾಳಲಿ. ಚಿರಕಾಲ ಆಳಲಿ ಎಂದು ಏಕಕಂಠದಿಂದ ನಾವೆಲ್ಲರೂ ಮನಃಪೂರ್ವಕವಾಗಿ ಹಾರೈಸೋಣ! ನಮ್ಮ ನೂತನ ಪ್ರಭುಗಳವರಲ್ಲಿ ಮತ್ತು ಅವರ ಮಹಾರಾಜಪದವಿಯಲ್ಲಿ ನಮಗಿರತಕ್ಕ ಅಚಲವಾದ ರಾಜಭಕ್ತಿ ವಿಶ್ವಾಸಗಳನ್ನು ಸೂಚಿಸಿ ಅವರಿಗೆ ನಮ್ಮ ಮನಃಪೂರ್ವಕವಾದ ಶುಭಾಶಂಸನಗಳನ್ನು ನಾನು ಶ್ಲಾಘಿಸಪಡಿಸಬೇಕೆಂಬುದು ತಮ್ಮ ಅಭಿಲಾಷೆಯೆಂದು ನಾನು ನಂಬಿರುವೆನು. ಆಳುವ ಮಹಾಸ್ವಾಮಿಯವರು ಈಗ ನಿರ್ವಹಿಸಬೇಕಾಗಿ ಬಂದಿರುವ ಜವಾಬ್ದಾರಿಯ ಕಾರ್ಯಗಳು ಹೊಸವೇನೂ ಅಲ್ಲ. ಅವರು ಪ್ರಾಥಮಿದ್ಯಾಭ್ಯಾಸ ಮಾಡಿ ಉತ್ತಮ ಶಿಕ್ಷಣವನ್ನು ಪಡೆದು, ಸ್ವದೇಶ ವಿದೇಶಗಳಲ್ಲಿ ವಿಶೇಷವಾಗಿ ಸಂಚಾರಮಾಡಿ, ತಮ್ಮ ಸಂಸ್ಥಾನದ ರಾಜ್ಯಭಾರ ಸಂಬಂಧದಾಗಿ ಬಗೆಹರಿಸಬೇಕಾಗಿ ಬರುವ ಸಮಸ್ಯೆಗಳನ್ನೆಲ್ಲ ಇತ್ಯರ್ಥಪಡಿಸಲು ತಕ್ಕ ಜ್ಞಾನ ಸಂಪತ್ತನ್ನೂ ಸಾಮರ್ಥ್ಯವನ್ನೂ ಪಡೆದು ಸುಸಜ್ಜಿತರಾಗಿದ್ದಾರೆ. ಆದಕಾರಣ ಈಗಿನ ಮಹಾಪ್ರಭುಗಳವರು ತಮ್ಮ ಮೇಲಿನ ಗುರುತರವಾದ ಕರ್ತವ್ಯ ಭಾರವನ್ನು ಶ್ರೇಷ್ಠರೀತಿಯಲ್ಲಿ ನಿರ್ವಹಿಸಿ, ತಮ್ಮ ಹಿಂದಿನ ಪ್ರಭುಶ್ರೇಷ್ಠರು ಯಾವ ಸಂಸ್ಥಾನದ ಅಭ್ಯುದಯ ಸಾಧನೆಗಾಗಿ ಅತ್ಯಧಿಕವಾಗಿ ಶ್ರಮಿಸಿ ಕಾರ್ಯಸಿದ್ಧಿ ಹೊಂದಿದರೋ—ಹಿಂದಿನ ಮಹಾಪ್ರಭುಗಳವರು ಮಂಡಿಸಿದ್ದ ಸಿಂಹಾಸನಕ್ಕೆ ಬಂದು ವಿರಾಜಿಸುತ್ತಿರುವ ಮತ್ತು ಈಗಿನ ಇಷ್ಟು ಚಿಕ್ಕವಯಸ್ಸಿನಲ್ಲೇ ಸಮಸ್ತರಿಗೂ ಪ್ರೀತಿಪಾತ್ರರಾಗಿರುವ ತಮ್ಮಿಂದ ಯಾವ ಸಂಸ್ಥಾನದ ಪ್ರಜೆಗಳು ಮುಂದಿನ ಪ್ರಗತಿಯನ್ನೂ ಅಭ್ಯುದಯ ಸಾಧನೆಯನ್ನೂ ನಿರೀಕ್ಷಿಸುತ್ತಿರುವರೋ—ಆ ನಮ್ಮ ಮೈಸೂರು ಸಂಸ್ಥಾನದ ಶ್ರೇಷ್ಠ ಪ್ರಭುಗಳೆಂಬ ಹೆಸರನ್ನು ಗಳಿಸಿ ಸಫಲರೀತಿಯಲ್ಲಿ ರಾಜ್ಯಭಾರಮಾಡುವರೆಂದು ನಾವೆಲ್ಲರೂ ಪೂರ್ಣಭರವಸೆಯಿಂದಿದ್ದೇವೆ.

ಪ್ರಜಾಪ್ರತಿನಿಧಿ ಸಭೆ

—

ಪ್ರಜಾಪ್ರತಿನಿಧಿ ಸಭೆಯು ಈ ತಿಂಗಳು 11 ನೇ ತಾರೀಖಿನ ದಿವಸ ರಾಜಧಾನಿಯ ಜಗನ್ಮೋಹನ ಬಂಗ್ಲೆಯಲ್ಲಿ ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಇಸ್ಮೈಲ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು,

ಭಾಷಣವು ಅನೇಕ ವಿಷಯಗಳನ್ನೊಳಗೊಂಡಿದೆ. ಪ್ರಥಮತಃ ಅಳಿದ ಮಹಾಸ್ವಾಮಿಯವರ ಗುಣಗಾನವನ್ನು ಸರ್ ಮಿರ್ಜಾರವರು ಹೃತ್ಪೂರ್ವಕವಾಗಿ ಮಾಡಿ ಅವರ ಅಕಾಲ ನಿಧನದಿಂದ ಸಂಸ್ಥಾನಕ್ಕೆ ಉಂಟಾಗಿರುವ ಅಪಾರ ನಷ್ಟವನ್ನು ದುಃಖವನ್ನು ವಿವರಿಸಿರುವರು.

ನಂತರ ಆಳುವ ಮಹಾಸ್ವಾಮಿಯವರನ್ನು ಪ್ರಶಂಶಿಸಿರುವರು.

ಯುದ್ಧ ವಿಚಾರದಲ್ಲಿ ಒಂದೆರಡು ಮಾತನಾಡಿ, ಪ್ರಪಂಚದಲ್ಲಿ ವಸ್ತೂರಚನೆಯು ಇನ್ನೂ ಹೆಚ್ಚಬೇಕಾದ ಅವಶ್ಯಕತೆಯನ್ನು ತಿಳಿಸಿರುವರು.

ನಂತರ ಸಂಸ್ಥಾನದ ಕಷ್ಟಸುಖ ಲಾಭ ನಷ್ಟಗಳನ್ನು ಕುರಿತು ಹೇಳಿರುವರು. ಸಂಸ್ಥಾನದ ವಿವಿಧ ಇಲಾಖೆಯ ಉತ್ಪತ್ತಿ ಖರ್ಚನ್ನು ವಿವರಿಸಿರುವರು. ಸಂಸ್ಥಾನದ ಪಡಿಳಿತದಲ್ಲಿನ ವಿವಿಧ ಕೈಗಾರಿಕೆ ಸಂಸ್ಥಗಳಿಂದ ದೇಶಕ್ಕಾಗುತ್ತಿರುವ ಪ್ರಯೋಜನವನ್ನು ವರ್ಣಿಸಿರುವರು.

ಗ್ರಾಮಪಂಚಾಯಿತಿಗಳು, ನಿಮ್ನತರಗತಿಗಳು, ಮುನಸಿಪಾಲಿಟಿಗಳು, ಡಿಸ್ಟ್ರಿಕ್ಟ್ ಬೋರ್ಡ್‌ಗಳು, ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯಬೋಧಾಯಕ ಸಭೆಗಳ ಹಿಂದಿನ ವರ್ಷದ ಕಾರ್ಯಕಲಾಪಗಳನ್ನು ವಿವರಿಸಿದರು.

ನಂತರ ಆಯವ್ಯಯಗಳ ಫಲಿತಾಂಶವನ್ನು ವಿವರಿಸಿ "ಸರ್ಕಾರದವರು ಉತ್ತಮ ರೀತಿಯಲ್ಲಿ ಪಡಿಳಿತವನ್ನು ನಿರ್ವಹಿಸಿದ್ದಾರೆಂಬುದನ್ನು ಈ ಫಲಿತಾಂಶವು ಸ್ಪಷ್ಟವಾಗಿ ತೋರಿಸುತ್ತವೆಂದು ತಾವುಗಳೆಲ್ಲರೂ ಒಪ್ಪುವಿರೆಂಬುದಾಗಿ ನಾನು ನಂಬಿದ್ದೇನೆ" ಎಂದು ತಿಳಿಸಿರುವರು.

ದಕ್ಷಿಣ ಆಫ್ರಿಕಾದಲ್ಲಿಯ ಇಟಾಲಿಯನ್ ದೇವುಗಳನ್ನೂ ವಿಮಾನಸ್ಥಾನಗಳನ್ನೂ ಬ್ರಿಟಿಷರು ಹಾಳುಮಾಡುತ್ತಿರುವರು.

o o o

ಬ್ರಿಟಿಷ್ ಮಂತ್ರಿಮಂಡಲದಲ್ಲಿದ್ದ ವಿ॥ ಚೇಂಬರ್‌ಲೇನ್‌ರವರು ಅನಾರೋಗ್ಯದ ನಿಮಿತ್ತ ನಿವೃತ್ತರಾದರು, ಅವರ ಸ್ಥಾನಕ್ಕೆ ಸರ್ ಜಾನ್ ಆಂಡರ್ಸನ್‌ರವರು ನಿಯಮಿಸಲ್ಪಟ್ಟಿದ್ದಾರೆ.

o o

ಜರ್ಮನ್ ಕೈಸರಿನ ಮೊಮ್ಮಗ 28 ವರ್ಷ ವಯಸ್ಸಿನ ಫ್ರೆಡ್‌ರಿಕ್ ರಾಜಕುಮಾರನು ಕೆಲ ಕಾಲದ ಹಿಂದೆ ಲಂಡನ್ನಿನಲ್ಲಿ ಅತಿಥಿಗಳಾಗಿದ್ದರು. ಈಗ ನಿರ್ಬಂಧದಲ್ಲಿಡಲ್ಪಟ್ಟಿದ್ದಾರೆ.

ಕಳೆದ ದಸರಾ ದರ್ಬಾರಿನಲ್ಲಿ
ಶ್ರೀಮನ್ಮಹಾರಾಜರವರು

ಈ ಕೆಳಗೆ ಕಂಡ ಮಹನೀಯರುಗಳಿಗೆ ದಯಪಾಲಿಸಿರುವ

ಬಿರುದುಗಳು

—

ಆದಲ್-ಉಲ್-ಮುಲ್ಕ್—ಜಸ್ಟಿಸ್ ಸಿ. ಅಬ್ದುಲ್ ಘನಿಯವರು, ಮೈಸೂರು ಹೈ ಕೋರ್ಟ್ ಜಡ್ಜಿಯವರು.

ರಾಜಧರ್ಮಪ್ರಸಕ್ತ—ಜಸ್ಟಿಸ್ ಸಿ. ನಾಗೇಶ್ವರಯ್ಯರವರು, ಮೈಸೂರು ಹೈ ಕೋರ್ಟ್ ಜಡ್ಜಿಯವರು.

ಸಿದಿಕ್-ಉಲ್-ಮುಲ್ಕ್—ಮಿ॥ ಸೆಡಗ್ ಷಾರವರು—ಶ್ರೀಮನ್ಮಹಾರಾಜರವರ ಅಸಿಸ್ಟೆಂಟ್ ಸೆಕ್ರೆಟರಿಯವರು.

ರಾಜಕಾರ್ಯಪ್ರಸಕ್ತ—ದಿವಾನ್ ಬಹದ್ದೂರ್ ಶ್ರೀ ಎಸ್. ಎಸ್. ಐಯ್ಯಂಗಾರ್ಯರು, ಮೈಸೂರು ಸರ್ಕಾರದ ನಿವೃತ್ತ ಚೀಫ್ ಎಂಜಿನಿಯರವರು ; ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿಯವರು, ಬೊಂಬಾಯಿ.

ರಾಜಸೇವಾಪ್ರಸಕ್ತ—ಮು ॥ ಎ. ಎಸ್. ರಾಘವಾಚಾರ್ಯರು, ಮೈಸೂರು ಸರಕಾರದ ಫೈನಾನ್ಷಿಯಲ್ ಸೆಕ್ರೆಟರಿಯವರು ; ವೈ. ಕೆ. ರಾಮಚಂದ್ರರಾಯರು, ಮೈಸೂರು ರೈಲ್ವೆಗಳ ಜನರಲ್ ಮ್ಯಾನೇಜರ್,

ರಾಜಸೇವಾಸಕ್ತ—ಶ್ರೀ ಬೆಳ್ಳಾವೆ ವೆಂಕಟನಾರಣಪ್ಪನವರು.

ರಾಜಸೇನಾತಿಲಕ—ಲೆ ॥ ಕ ॥ ಗೋಪಾಲರಾಯರು.

ಲೋಕಸೇವಾಸಕ್ತ—ಮು ॥ ಸಿ. ಎಸ್. ಕುಪ್ಪಸ್ವಾಮಯ್ಯಂಗಾರ್ ರಿಟೈರ್ಡ್ ಡೆಪ್ಯೂಟೀ ಕಮಿಷನರ್.

ಪಂಡಿತರತ್ನಂ—ಮಹಾವಿದ್ವಾನ್ ಶ್ರೀ ಆನೆಕಲ್ ಶ್ರೀನಿವಾಸಾಚಾರ್ಯರು. ; ಮಹಾವಿದ್ವಾನ್ ಶ್ರೀ॥ ಎಂಬರುಮಾನಾರ್‌ರವರು.

ವೇದರತ್ನಂ—ಮಹಾವಿದ್ವಾನ್ ಶ್ರೀ ಕೃಷ್ಣಾವಧಾನಿಗಳು.

ಸಂಗೀತರತ್ನಂ—ಆಸ್ಥಾನ್ ವಿದ್ವಾನ್ ಶ್ರೀ॥ ಟಿ. ಚೌಡಯ್ಯನವರು ಮೈಸೂರು.

[ಮೇಲ್ಕಂಡ ಬಿರುದಾಂಕಿತರುಗಳಿಗೆಲ್ಲಾ ನಮ್ಮ ಅಭಿನಂದನೆಗಳು—ಎಡಿಟರ್.]

ಆನಂದವಿಹಾರ 12 ಉತ್ತರ

1. ಕೊಳಕು.
2. ನೋಟ.
3. ಅಕ್ಬರ್.
4. ಉಪಾಯ.
5. ಕಿರಜು.

ಒಹುಮಾನ ಪಡೆದವರ ಹೆಸರು ಮುಂದಿನವಾರ ಪ್ರಕಟಿಸಲಾಗುತ್ತೆ. ಮ್ಯಾ. ಆ. ವಿ.